ಕೊರವಂಜಿ



Koravanji

ಡಿಸೆಂಬರ್
೧೯೫೬

★

ಸಂಪಾದಕರು :
ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ರಾಮಿ
ಶ್ರೀ॥ ಕಾಮತ್
ಶ್ರೀ॥ ಶ. ಕುಮಾರ್
ಶ್ರೀ॥ ಪುರುಷೋತ್ತಮ
ಶ್ರೀ॥ ಕೇಫ
ಶ್ರೀ॥ ಶನಿ
ಶ್ರೀ॥ ಪಾಟಾಳಿ
ಶ್ರೀ॥ ಆ. ರಾ ಸೇ.
ಶ್ರೀ॥ ದಾಶರಥಿ ದೀಕ್ಷಿತ್
ಶ್ರೀ॥ ರಾಮಸ್ವಾಮಿ
ಡಾ॥ ಬಚ್ಚ

ಇತ್ಯಾದಿ, ಇತ್ಯಾದಿ.

ಬಿಡಿ ಪ್ರತಿ


For 3 way Beauty Treatment....
RAJA
SNOW
AMLA HAIR OIL , KASTURI SOAP
MANYAM & CO. BANGALORE MADRAS MADURAI BOMBAY
FAS

ಶೀಘ್ರದಲ್ಲಿಯೇ ನಿರೀಕ್ಷಿಸಿ


ಬೆಂಗಳೂರು **ಸ್ಟೇಟ್ಸ್**

ಮತ್ತು ಇತರ ಪ್ರಮುಖ ಕೇಂದ್ರಗಳಲ್ಲಿ

ಸಾಹಿಣಿಯವರ

ಪೆಂಕಿ ಪೆಳ್ಳಾಂ (ತೆಲುಗು)

(STUBBORN WIFE)



ಎನ್. ಟಿ. ರಾಮರಾವ್, ಅಮರನಾಥ್, ರಮಣರೆಡ್ಡಿ, ಕೆ|| ಶೆ|| ಜೋಗಾರಾವ್,
ಶ್ರೀರಂಜನಿ, ರಾಜಸುಲೋಚನ, ಸೂರ್ಯಕಾಂತಂ, ಹೇಮಲತಾ,
ಕೃಷ್ಣಜ್ಯೋತಿ ಮುಂತಾದವರು

ನಿರ್ದೇಶನ : ಕೆ. ಕಾಮೇಶ್ವರರಾವ್

ನೃತ್ಯಗಳು : ಇ. ವಿ. ಸರೋಜ

ಸ್ಟುಡಿಯೋ : ವಾಹಿನಿ

ನಿರ್ಮಾಪಕರು :
ಎಸ್. ಭಾವನಾರಾಯಣ ಮತ್ತು ಡಿ. ಬಿ. ನಾರಾಯಣ

AN EMERALD RELEASE

ಭಗವಂತನ ದರ್ಶನವಾಗುವವರೆಗೆ ಅನ್ನಾಹಾರ ಮುಟ್ಟೆನೆಂದು ಪ್ರತಿಜ್ಞೆ ಮಾಡಿದ
ಅಪ್ರತಿಮ ದೈವಭಕ್ತಿಯಿಂದ ಆತ್ಮೋದ್ಧಾರದ ಮಾರ್ಗ ಕಂಡುಕೊಂಡ
ಭಕ್ತಾಗ್ರಣಿಯ ಕಥೆ

ನವೆಂಬರ್ 30 ರಿಂದ ಪ್ರಾರಂಭ

ಬೆಂಗಳೂರು : ಗೀತಾ ★ **ಮೈಸೂರು :** ನ್ಯೂ ಅಪೇರಾ

ದಾವಣಗೆರೆ : **ಮೋತಿ**
ಶಿವಮೊಗ್ಗ : **ವಿನಾಯಕ**
ಚಿತ್ರದುರ್ಗ : **ರೂಪವಾಣಿ**

ಚಿಕ್ಕಮಗಳೂರು : **ಗುರುನಾಥ**
ಮಂಡ್ಯ : **ಮಂಡ್ಯ ಟಾಕೀಸ್**
ತುಮಕೂರು : **ಕೃಷ್ಣಾ**
ಕೋಲಾರ : **ವೆಂಕಟೇಶ್ವರ**

ಚಿತ್ರಮಂದಿರಗಳಲ್ಲಿ ಏಕಕಾಲದಲ್ಲಿ ಪ್ರದರ್ಶನ

ಜಗನ್ನಾಥ್ ಪ್ರೊಡಕ್ಷನ್ಸ್‌ರವರ—

ಭಕ್ತ ವಿಜಯ (ಕನ್ನಡ)

- ★ ಪಂಡರಿಬಾಯಿ
- ★ ಮೈನಾವತಿ,
- ★ ರಾಜಕುಮಾರ್
- ★ ಡಿಕ್ಕಿ ಮಾಧವರಾವ್
- ★ ವಿಮಲಾನಂದದಾಸ್
- ★ ಸಿ. ಟಿ. ಶೇಷಾಚಲಂ
- ★ ಹನುಮಂತಾಚಾರ್
- ★ ಸಿದ್ಧಯ್ಯಸ್ವಾಮಿ

ಮುಂತಾದವರು



ನಿರ್ಮಾಪಕ : **ಪಿ. ಕೆ. ಜನಾರ್ಧನ್**
ಸ್ಟುಡಿಯೋ : **ಫಿಲಿಂ ಸೆಂಟರ್**
ನಿರ್ದೇಶನ : **ಎ. ಕೆ. ಪಟ್ಟಾಭಿ**

ಸಂಗೀತ ; **ಪಿ. ಶ್ಯಾಂ ಮತ್ತು ಆತ್ಮನಾಥ್**

ಮುಂದಿನ ಬದಲಾವಣೆ : ಮಂಗಳೂರು : **ಜ್ಯೋತಿ.**

Sri Raghavendra Release.

ಅನುಪಮ ಸಾಮಾಜಿಕ ಚಿತ್ರ!

ಡಿಸೆಂಬರ್ ತಿಂಗಳಲ್ಲಿ ಪ್ರದರ್ಶನ

ಬೆಂಗಳೂರು :

ಸಾಗರ್ ★ ಮಿನರ್ವ

ಮೈಸೂರು: ಚಿತ್ರದುರ್ಗ: ದಾವಣಗೆರೆ:

ರಾಜಕಮಲ್ ಯೂನಿಯನ್ ಅಶೋಕ್

ಮತ್ತು ಕರ್ನಾಟಕದ ಇತರ ಕೇಂದ್ರಗಳಲ್ಲಿ



ಮೈಸೂರು ಸಂಸ್ಥಾನಕ್ಕೆ :

ವಿಜಯಾ ಟಾಕೀ ಡಿಸ್ಟ್ರಿಬ್ಯೂಟರ್ಸ್,

ಬೆಂಗಳೂರು-೯

ಮುಂಬಯಿ ಪ್ರಾಂತ್ಯ ಮತ್ತು ಹೈದರಾಬಾದು ಸಂಸ್ಥಾನಕ್ಕೆ :

ಶ್ರೀನಿವಾಸ ಪಿಕ್ಚರ್ಸ್, ಗದಗ.

ಕಟಕ

ಕೊರವಂಜಿ

A. ANANTHIAH.

ಸಂಪುಟ ೧೬ ಡಿಸೆಂಬರ್ ೧೯೫೬ ಸಂಚಿಕೆ ೯

ಕುಹಕಿಡಿಗಳು

ಅರಿಯಲೂರು ರೈಲ್ವೆ ಅಪಘಾತದಲ್ಲಿ—ಅನಾಹುತಕ್ಕೊಳಗಾದವರ ಸಂಖ್ಯೆ ಏರುತ್ತಿದೆ....(ಪತ್ರಿಕೆ)

—ಲಾಲ್‌ಬಹದ್ದೂರ್ ಶಾಸ್ತ್ರಿಗಳೂ ಈ ಸಂಖ್ಯೆಯಲ್ಲಿ ಸೇರಿದ್ದಾರೆಯೇ?

*　　*　　*

ಮೊನ್ನೆ ರೈಲಿನಲ್ಲಿ ಸಿಕ್ಕ ಮೃತದೇಹವೊಂದರ ಮೇಲೆ, ಎರಡು ರಾಜಕೀಯ ಪಾರ್ಟಿಯ ರಸೀತಿಗಳು ಹೊರತಾಗಿ, ಬೇರೆ ಯಾವ ಹಿಂಸಾತ್ಮಕ ಗುರುತುಗಳೂ ಇದ್ದಿಲ್ಲವಂತೆ.

*　　*　　*

ನಾಗಾ ಜನರು, ರೈಲ್ವೆ ಅಪಘಾತಗಳನ್ನು, ಭಾರತದಲ್ಲಿ, ನಡೆಸುತ್ತಿದ್ದಾರೆಂಬ ಕಮ್ಯೂನಿಸ್ಟ್ ಸುದ್ದಿಯು ಇನ್ನೂ ಹೊರಬಿದ್ದಿಲ್ಲವಂತೆ.

*　　*　　*

ಅರಿಯಲೂರು ರೈಲಿನಲ್ಲಿ ಭಿಕ್ಷುಕನೊಬ್ಬನು ಬೆಳಗಿನ ಝಾವ ೫-೪೦ಕ್ಕೆ ಹಾರ್ಮೋನಿಯಂ ಬಾರಿಸುತ್ತಿದ್ದ. ಆಗಲೇ ಸೇತುವೆಯ ಅಪಘಾತವಾಯ್ತು ಎಂದೆಂಬ ಸುದ್ದಿ ಶುದ್ಧ ಕುಹಕ!!

ಸೂಯೆಜ್ ಕಾಲುವೆಯಲ್ಲಿ ಇಳಿಯಾ ಮುಳುಗಿ ಹೋದವರು.

—ಶ್ರೀ ಎಂಥೋಣಿ ಈರ್ಡರವರು ! !

*　　　*　　　*

ಗಾಂಧಿ ನಗರದಲ್ಲಿ ಒಂದೇ ಮನೆಗೆ ಮೂರು ಸಲ ಭಿಕ್ಷೆ ಬೇಡುಕ್ಕೆ ಹೋದವನೊಬ್ಬನು "ಸ್ವಾಮಿಾ! ಈ ಬಡಾವಣೆಯುಲ್ಲಿ ಮನೆಗಳಿಗೇ ಅಭಾವವಾದ್ದರಿಂದ, ಹೀಗೆ ಬಿದ್ದ ಮನೆಗೇ ಬೀಳಬೇಕಾಗಿದೆ" ಎಂದು ವಿವರಣೆ ಕೊಟ್ಟನಂತೆ.

*　　　*　　　*

ಹಂಗೇರಿಯುವರು, ಅಮೇರಿಕಾದವರ ಹಂಗೂ ಬೇಡ, ರಷ್ಯಾದವರ ಹಂಗೂ ಬೇಡ ಎಂದು ಆಶಿಪಡುತ್ತಿದ್ದಾರಂತೆ.

*　　　*　　　*

"ಕುಮಾರ ಕೃಪ"ದಲ್ಲಿ ಪ್ರಜಾ ಸೋಷಲಿಸ್ಟ್ ಪಾರ್ಟಿಯು ಅಖಿಲ ಭಾರತ ಸಮ್ಮೇಳನ ನಡೆಯಿತಂತೆ.

—ಕುಮಾರ ಕೃಪದಲ್ಲಿ ಮಾಜಿ ಮುಖ್ಯ ಸಚಿವರು ಇದ್ದರು.

*　　　*　　　*

ಮಹಾಭಾರತದಲ್ಲಿ ಶಕುನಿಯು ಎಂತಹ ಟೋಪಿಯನ್ನು ಹಾಕಿಕೊಳ್ಳುತ್ತಿದ್ದ ಎನ್ನುವ ವಿಚಾರದಲ್ಲಿ, ಅಖಿಲ ಭಾರತ ಪಂಡಿತರ ಘೋಷ್ಟಿಯೊಂದು ಸೇರಿ ನಿರ್ಣಯ ಗೊಳ್ಳುತ್ತದೆ. (ಸುದ್ದಿ)

—ನಮಗೇ ಗೊತ್ತಿರುವ ಈ ವಿಷಯಕ್ಕೆ ಇಷ್ಟು ಗೊಂದಲವೇ?

*　　　*　　　*

ಮುಂಬರುವ ಸಾಹುಕಾರರ ಮನೆಂಯ ಮದುವೆಯಲ್ಲಿ, ಆರತಕ್ಷತೆಯ ಸಭೆಯಲ್ಲಿ ಹಾಡುವ ಸಂಗೀತಗಾರ್ತಿಯರ ಫೋಟೋ ಮತ್ತು ಹೆಸರುಗಳನ್ನು ಹಾಕುತ್ತಾರೆಯೇ ವಿನಹಾ, ಮದು ಮಕ್ಕಳದಲ್ಲಾ! ಎಂಬುವ ಸುದ್ದಿಯು ದಿಟವೆಂಬಂತೆ ಕಂಡರೂ, ಆಚರಿಸಲ್ಪಡುವುದಿಲ್ಲವಂತೆ.

*　　　*

ಹೆಬ್ಬಿ ಗುಬ್ಬಾಲಿಯುವರೊಬ್ಬರು, ಕೇಂದ್ರ ಅಂಚೆ ಸಚಿವರಿಗೆ ಒಂದು ಕಾಗದ ಬರೆದು, "ಮೊನ್ನೆ ನಮಗೆ ಬಂದ ಕಾಗದಲ್ಲಿ ಎರಡು ಆನೆ ಪಟಾಕಿಗಳಿದ್ದುವು. ಬೀಡಿ ಸೇದುತ್ತ ನಾವು ಕಾಗದಗಳನ್ನು ಒಡೆದಾಗ ಅನಾಹುತವಾಯಿತು. ತಕ್ಷಣ ರಾಜೀ ನಾಮೆ ಕೊಟ್ಟುಬಿಡಿ. ಇಲ್ಲಾ! ಜಮೈಕಾಗೆ ರಜಾದ ಮೇಲೆ ಹೋಗಿ". ಎಂದು ಹೇಳಿರುವರಂತೆ!

*　　　*　　　*

—o—

ಉರಿಗಾಳು

ನೌಕಾದಿನ, ಪ್ರದೇಶ ಸೇನಾದಿನ, ಮಕ್ಕಳದಿನ, ರೆಡ್‌ಕ್ರಾಸ್ ದಿನ, ವಿಮಾನ ದಿನ ಇತ್ಯಾದಿಗಳಿಗೂ, ವನ ಮಹೋತ್ಸವ, ಗೋಸಂವರ್ಧನೋತ್ಸವ, ಇತ್ಯಾದಿಗಳಿಗೂ ಕಾಲಾವಕಾಶ ಸಾಲದೆ ಇರುವುದರಿಂದ, ವರ್ಷವೊಂದಕ್ಕೆ 400 ದಿನ, ಎಂದು ಘೋಷಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆಯಂತೆ.

*　　*　　*

ಆಯುರ್ವೇದ ರೀತ್ಯಾ ಇಂಜಕ್ಷನ್‌ಗಳನ್ನು ಕೊಡುವುದರಿಂದ, ಅಲೋಪತಿ ರೀತ್ಯಾ ಕೊಡುತ್ತಿರುವ ಇಂಜಕ್ಷನ್‌ಗಳಿಗಿಂತ ಹೆಚ್ಚು ಸಂಖ್ಯೆಯ ಅನಾಹುತಗಳು ಸಂಭವಿಸಲಾರದೆಂದು ವೈದ್ಯರೊಬ್ಬರು ಆಶ್ವಾಸನವಿತ್ತಿದಾರೆ.

*　　*　　*

ಕನ್ನಡ ಮಾತನಾಡುವ ಜನರ ನಡುವೆ, ಕನ್ನಡದ ಸಹಾಯದಿಂದ, ಹೆಚ್ಚಿನ ದ್ವೇಷ ಬೆಳೆಸಲು ಸಾಧ್ಯ, ಎಂದು ವೀರಕನ್ನಡಿಗರೊಬ್ಬರು ಕಂಡುಹಿಡಿದಿದಾರಂತೆ.

*　　*　　*

ಬೆಂಗಳೂರಿಂದ ಬೀದರ್, ಬಿಜಾಪುರ, ಕುಮಟ, ಮಂಗಳೂರು ಇತ್ಯಾದಿ ದೂರ ದೂರುಗಳಿಗೆ ಬಸ್ಸುಗಳು ಹೊರಡಬೇಕೆಂದು ಅನೇಕರು ಒತ್ತಾಯ ಪಡಿಸುತ್ತಿದಾರೆ....ಹೊರಡಿಸುವುದಕ್ಕೇನು ಕಷ್ಟ? ತಲಪಿಸುವುದು ತಾನೆ ತಾಪತ್ರಯ?

*　　*　　*

ಸರ್ಕಾರಿ ಇಸ್ತಿಹಾರ್ ನಾಮೆಗಳನ್ನೂ, ಹುಕುಮ್ಮುಗಳನ್ನೂ, ಕಾನೂನುಗಳನ್ನೂ ಇನ್ನು ಮುಂದೆ ಕನ್ನಡದಲ್ಲೇ ಜಾಹಿರಾತಿಸಬೇಕೆಂದು ಜುಲುಂ ಮಾಡಲಾಗಿದೆ....ಹಾಗೆ ಮಾಡಿದವರ ಕನ್ನಡ ಪ್ರೇಮ ಎಷ್ಟು ಎಂದು ಈ ಸುದ್ದಿಯ ಶೈಲಿಯೇ ಕೂಗಿ ಹೇಳುತ್ತದೆ.

*　　*　　*

ಹೊಸ ಗೌರ್ನರುಗಳ ನೇಮಕಕ್ಕೂ, ಅನೇಕ ದೇಶನಾಯಕರು ಈಚೆಗೆ ಆಕಸ್ಮಾತ್ ಚುನಾವಣೆ ಬಿದ್ದಿರುವುದಕ್ಕೂ, ಯಾವ ಸಂಬಂಧವೂ ಇಲ್ಲವಂತೆ. ಏಕೆಂದರೆ, ಅವರೆಲ್ಲರಿಗೂ ಬೇರೆ ಹುದ್ದೆಗಳು ದೊರಕುವ ನೀಡುವ ಭರವಸೆ ಇದೆಯಂತೆ.

*　　*　　*

ಮೊನ್ನೆ, ಫುಟ್‌ಬಾಲ್ ಮ್ಯಾಚೊಂದರ ನಡುವೆ, ಪ್ರೇಕ್ಷಕರಲ್ಲಿ ಹಲವು ಪೈಲ್ವಾನರು ನುಗ್ಗಿ, ಒಂದು ಟೀಮನ್ನು ಸದೆಬಡಿಯಲು ಪ್ರಯತ್ನಿಸಿದರಲ್ಲವೆ? ಆ ಪೈಲ್ವಾನರು ಈಗ ಬಯಲೆಲ್ಲ ತಮ್ಮದೇ ಎಂದು ಸಾರುತ್ತಿದಾರೆ. ಈಗ ಅವರು ತಮ್ಮ ಚರ್ಯೆಯನ್ನು ಈಡನ್ ತಂತ್ರ ಸಾಧನೆ ಎಂದು ಹೇಳುತ್ತಾ, ಮೆರೆಯುತ್ತಿರುವರಂತೆ.

*　　　*　　　*

1957 ನೆಯ ಸಂವತ್ಸರದ ಕ್ಯಾಲೆಂಡರುಗಳನ್ನು ಯಾರಿಗೂ ಉಚಿತವಾಗಿ ಹಂಚಬಾರದೆಂದು ಕೆಲವು ಮುಖ್ಯ ಕಂಪೆನಿಗಳು ನಿರ್ಧರಿಸಿರುವುದರಿಂದ, ಖಾಲಿ ಗೋಡೆ ಬಿಟ್ಟುಕೊಂಡಿರುವ ಅನೇಕ ಸಂಸಾರಿಕರಿಗೆ ನಿರಾಶೆಯಾಗಿದೆಯಂತೆ.

*　　　*　　　*

ಬಿ. ಎ. ಡಿಗ್ರಿಯ ಪರೀಕ್ಷೆಯಲ್ಲಿ, ಕನ್ನಡ ಪ್ರಶ್ನೆಪತ್ರಿಕೆಗೆ ಉತ್ತರ ಬರೆದು ಸೋತ ಒಬ್ಬ ವಿದ್ಯಾರ್ಥಿ ತನ್ನ ಉತ್ತರಗಳೆಲ್ಲ ಉತ್ತಮ ನವ್ಯ ಶೈಲಿಯಲ್ಲಿ ತಾನು ಬರೆದಿರುವುದಾಗಿಯೂ, ನವ್ಯ ವಿರೋಧಿಗಳಾದ ಹಲವರು ತಮಗೆ ನಂಬರ್ ಕೊಡಲಿಲ್ಲವೆಂದೂ ದೂರಿತ್ತಿದಾರಂತೆ.

*　　　*　　　*

ಪಾದಚಾರಿಗಳಿಗೇ ಇಲ್ಲದ, ಬರಿಯ ಕಾರುಗಳಿಗೆ ಮಾತ್ರ ಮೀಸಲಾಗಿರುವ, ರಸ್ತೆಗಳನ್ನು ಮುಖ್ಯ ಮುಖ್ಯ ನಗರಗಳ ಮಧ್ಯೆ ನಿರ್ಮಿಸಲು ಯೋಜನೆ ಇದೆಯಂತೆ. ತಾವು ಕಾರಲ್ಲಿ ಕೂತು, ಸಂಚರಿಸುವುದನ್ನು ನಾಲ್ಕು ಜನ ನೋಡಿ ಹೊಟ್ಟೆ ಉರಿಸಿಕೊಳ್ಳಬೇಕೆಂಬುದೇ ಅಲ್ಲವೇ, ಕಾರೊಡೆಯರ ಉದ್ದೇಶ.

*　　　*　　　*

ಇಂಡಿಯಾದೇಶದ ಸಾಂಬಾರ್‌ಪುಡಿ ಚಟ್ನೆಪುಡಿಗಳಿಗೆ ಈಚೆಗೆ ಆಸ್ಟ್ರೇಲಿಯಾ ದೇಶದಲ್ಲಿ, ಅದರಲ್ಲೂ ಮೆಲ್‌ಬರ್ನ್ ನಗರದಲ್ಲಿ, ತುಂಬಾ ಗಿರಾಕಿ ಇದೆಯಂತೆ.... ನಮ್ಮ ಕಣ್ಣು ಏಕೆ ಕೆಂಚಗಾಗಿದೆ ಅಂತ ವಿಚಾರಮಾಡಿ, ಅವರು ಈ ಪುಡಿಗಳಿಂದಲೇ ಎಂದು ಊಹಿಸಿರಬೇಕು.

*　　　*　　　*

ಶ್ರೀರಾಮ ಪುರಕ್ಕೂ, ಸೀತಾ ವಿಳಾಸ ಅಗ್ರಹಾರಕ್ಕೂ ಮಧ್ಯೆ ಬರುವ ಬಡಾವಣೆಗಳಿಗೆ ಏನು ಹೆಸರು ಕೊಡಬೇಕು ಎಂದು ದೇಶಪಿತೃಗಳು ಯೋಚಿಸುತ್ತಿರುವರಂತೆ.

—ಯಾಕೆ? ಲವ ಕುಶನಗರ ಎಂದೆನ್ನಬಾರದೇ?

*　　　*　　　*

'ಶಾಂತಿ' 'ಶಾಂತಿ' ಎಂದು ಬೊಬ್ಬೆಯಿಡುತ್ತಿರುವ ಶಾಂತಿ ದೂತರನ್ನು ನವ್ಯ ಕವಿಗಳಿಗೂ, ಇತರ ಕವಿಗಳಿಗೂ ಮಧ್ಯೆ ತಂದು ನಿಲ್ಲಿಸಬಾರದೇ?

ಕೊರವಾವಲೋಕನ

ಮಕ್ಕಳ ಆಟದ ಮೈದಾನವನ್ನು ಮುಖ್ಯಮಂತ್ರಿಗಳು ಉದ್ಘಾಟನೆ ಮಾಡುತ್ತಾರೆ ಅನ್ನಿ. ಅದರಲ್ಲಿ ಮಕ್ಕಳಾಡಲು ಇಳಿಜಾರು ಬಂಡೆಯೊಂದನ್ನು ಸಿಮೆಂಟಿನಲ್ಲಿ ಕಟ್ಟಿದ್ದಾರೆ ಅನ್ನಿ. ಮಂತ್ರಿಗಳು ಮನಸ್ಸು ತಿರುಗಿ ಈ ಇಳಿಜಾರು ಬಂಡೆಯಮೇಲೆ ತಾವು ಮೊದಲು ಜಾರಿ ಆಡಲು ಅಪೇಕ್ಷಿಸುತ್ತಾರೆ ಅಂತಲೂ ಅಂದುಕೊಳ್ಳಿ. ಹೀಗಾಗಬಹುದು ಎಂದು ಅಲ್ಲಿ ನೆರೆದಿರುವ ಮೈದಾನದ ಅಧಿಕಾರಿ ವರ್ಗದವರು ತಮ್ಮ ಬೆಣ್ಣೆಯ ಕೈಯನ್ನು ಆ ಇಳಿಜಾರು ಬಂಡೆಗೂ ಚೆನ್ನಾಗಿ ಪ್ರಾಥಮಿಕ ಬೆಣ್ಣೆ ತಿಕ್ಕುವ ಕಾರ್ಯಕ್ರಮವನ್ನಾಗಿ ಮಾಡಿದ್ದಾರೆಂಬುದು ಸಹಜವೇ ಅಲ್ಲವೇ!

ಅಂತಹ ಬಂಡೆಯಮೇಲೆ, ಅಂತಹ ಸಚಿವರು ಜಾರಿ ಬೀಳುವುದು ಒಂದು ರೀತಿಯಾಗಿ ಚೆನ್ನೇ ಅಲ್ಲವೇ!

ಆ ರೀತಿ ಕೊರವ ಆ ಸಂಜೆ ಕ್ಲಬ್ಬಿನಲ್ಲಿ ತಾನು ಕೂತಿದ್ದ ಕುರ್ಚಿಯಲ್ಲೇ ಜಾರಿ ಬಿದ್ದು ಅರೆ ಮಲಗಿದವನಂತೆ ಕಾಣಿಸಿದ.

ದೂರದಲ್ಲಿದ್ದ ನಾನು ಬೇಗ ಓಡಿಹೋದೆ ಅವನ ಮೇಜಿನ ಹತ್ತಿರ. ಉಪ್ಪಿಲ್ಲದ ಉಪ್ಪೇರಿ, ಸೊಪ್ಪಿಲ್ಲದ ಸಾಗು, ಹರಿದರೆ ಮುರಿಯದ ಪೂರಿ ಇಷ್ಟೇ ಇದ್ದಿದ್ದು ಅವನ ಮೇಜಿನಮೇಲೆ. ಸುತ್ತಲೂ ಯಾರೂ ಇಲ್ಲ. ಇದನ್ನು ತಿಂದೇ, ತಿನ್ನಲು ಯತ್ನಿಸಿಯೇ ಇವ ಹೀಗಾದನೆ ಎಂದು ಕೊಂಕಿನಿಂದ ಬಲ ಹುಬ್ಬೆದ್ದಿತು.

ಆಗ ದಯಾಮಯ ಕೊರವ ಹೇಳಿದ, ನಾನು ಜಾರಿದ್ದು ನೋಡಿಯೇ ನೀ ಬಂದಿದ್ದಲ್ಲವೇ? ಎಂದ.

ಹ್ಞಾ ಎಂದು ಹುಬ್ಬಿಳಿಸಿದೆ.

"ನೋಡು ಇದೇ ರೀತಿ ಈಡನ್ ಕೂಡ ಜಮೈಕಾತನಕ ಜಾರಿಯೇ ಬಿಟ್ಟ, ಜಾಣ ಕಣಯ್ಯ!" ಅಂದ.

ಅದನ್ನು ಹೇಳಬಹುದಿತ್ತಲ್ಲಾ ಎಂದನ್ನುವಷ್ಟರಲ್ಲೇ ಅವ, ಆಡುವ ಮಾತಿಗಿಂತ ಮಾಡಿತೋರಿಸುವುದು ಹಿರಿಯರ ಲಕ್ಷಣ ಎಂದು ನೀನು ಕೇಳಿಯೇ ಇಲ್ಲವೇ? ಎಂದು ನನ್ನ ಬಾಯಿ ಮುಚ್ಚಿಸಿದ.

*　*　*

ಲಕ್ಷಣವಾಗಿ ಈರುಳ್ಳಿ ಪಕೋಡದ ರಾಶಿಯನ್ನು ಅನವಸರವಾಗಿ ಮೆದ್ದು ಚೊಂಬು ಕಾಫಿ ಜತೆಗೆ ಹೊಟ್ಟೆಗೆ ಸಾಗಿಸಿ, ತೇಗಿ, ಸುಖ ಸಂತಸವನ್ನು ಸೂಸುವ ದಫೇದಾರ್ ದೇರಣ್ಣನ ಕಳೆ ಇತ್ತು ಅರವಾಮುದ್ದೈಂಗಾರಿಯ ಮುಖದಲ್ಲಿ. ಹಳೆಯ ಕಾಲದ ಮದುವಣಿಗ, ಹಸೆಯಮೇಲೆ ಪಕ್ಕದಲ್ಲಿ ಕುಳಿತ ಹಳೆಯಕಾಲದ ಮದುವಣ ಗಿತ್ತಿಯ ಬಾಗಿದ ಮಂಡಿಯನ್ನೇ ದುರುಗುಟ್ಟಿ ನೋಡುವಂತೆ, ನವೀನಕಾಲದ ಪುರೋಹಿತ, ಹಸೆಯಮೇಲಿನ ವಧೂವರರ ಚೇಷ್ಟೆಯನ್ನು ನೋಡಲಾರದೆ, ದರ್ಭೆ ಯನ್ನೇ ದುರುಗುಟ್ಟಿ ನೋಡುವಂತೆ, ಕೊರವ, ಅರವಾಮುದ್ದೈಂಗಾರಿಯನ್ನೇ ದುರುಗುಟ್ಟಿ ನೋಡಿದ.

ಚಟಾಕಿ ಮಾತುಗಳು ಹಾರಬಹುದು ಎಂದು, ನಾನು ಕಿವಿಗಳೆರಡನ್ನೂ ನಿಮಿರಿ ನಿಲ್ಲಿಸಿ, ಕಣ್ಣು ಎವೆ ಇಕ್ಕದೆ ಕುಳಿತೆ.

"ಅರವಾಮೊದ್ದು, ಅಲ್ಲಿ ಯಾರೋ ವರಮಾನ ತೆರಿಗೆಯಧಿಕಾರಿ ಇತ್ತ ಬಂದಂತಿದೆ" ಎಂದು ಕೊರವ ಹಠಾತ್ತನೆ ಹೇಳಿದ.

ಅರವಾಮೊದ್ದು ಲೆಕ್ಕದಲ್ಲಿ ಸ್ವಲ್ಪ ಮೊದ್ದು. ಸರಿಯಾದ ಲೆಕ್ಕವನ್ನೇ ವರಮಾನ ತೆರಿಗೆಯವರಿಗೆ ಕೊಟ್ಟು, ಸಿಕ್ಕಿಹಾಕಿಕೊಂಡಿದ್ದ. ಅವನಿಗೆ ಅದೇ ಭಯ ಎಲ್ಲಿ ಯಾವಾಗ ಅವರು ಬಂದು, ಇವನ ಅಂಗಿ ಟೋಪಿ ಕಸಿದುಕೊಂಡು, ನಿರ್ವಾಣಾಸ್ಥೆಗೆ ತಂದುಬಿಡುತ್ತಾರೋ ಎಂಬ ಅಘೋರ ಭಯ. ಅವರು ಹಾಗೆ ಮಾಡಲು ಶಕ್ಯರು ಎಂಬ ಪೂರ್ಣ ನಂಬಿಕೆ. ಬುದ್ಧನಲ್ಲ! ನಾನು! ನನಗೇಕೆ ನಿರ್ವಾಣ ಸೇವೆ ಇವರು ಮಾಡುತ್ತಾರೆ" ಎಂಬ ಅನುಮಾನವೂ ಆತನಿಗೆ ಬರಲೊಲ್ಲದು. ಕಾರಣ :—

ಕೊರವನು ಹೇಳಿದ್ದು ಕೇಳಿ, ಬಿರುಗಾಳಿಯಂತೆ ಅಲ್ಲಿಂದ ಒಳ ಕೊಠಡಿಗೆ ಓಡಿಹೋದ.

ಐದು ನಿಮಿಷವಾದಮೇಲೆ ಹಿಂತಿರುಗಿದ. "ಅಲ್ಲವೋ! ಕೊರವ ಯಾರೂ ಇಲ್ಲವಲ್ಲೋ!" ಅಂದ ಗೋಗರೆಯುವ ದನಿಯಲ್ಲಿ.

ಆಗ ಕೊರವ ಅಂದ "ಇಲ್ಲಿಂದ ಆ ಒಳ ಕೊಠಡಿಗೆ ಮೂವತ್ತು ಗಜ ಅಂತರ ವಿದೆ. ಇಲ್ಲಿಂದ, ಬಲು ಬೆದರಿ ಅತಿ ರಭಸದಲ್ಲಿ ಓಡಿಹೋದ ನೀನು ಕೇವಲ ೧೩ ನಿಮಿಷಗಳನ್ನು ತೆಗೆದುಕೊಂಡೆ. ಇಂತಹ ವಸ್ತಾದಿ ನೀನು ಅಂಗಿಯಮೇಲೆ ಐದುಂಗುರದ ಒಲಂಪಿಕ್ ಬ್ಯಾಡ್ಜ್ ಹಾಕಿಕೊಂಡಿದ್ದೀಯಲ್ಲೋ, ನಿಮ್ಮಂತಹವರೇ, ನಮ್ಮದೇಶದ ಪ್ರತಿನಿಧಿಗಳನ್ನು ಆಯ್ಕೆ ಮಾಡಿ, ತಯಾರು ಮಾಡಿ, ಕಳಿಸಿ, ನಮಗೆ ಅವಮಾನವನ್ನೇ ಮಾಡುತ್ತೀರಲ್ಲೋ!" ಎಂದು.

ಆಟಕ್ಕೆ ಹೋದವರೆಲ್ಲಾ ಗೆಲ್ಲಲೇ ಬೇಕು ಎಂದೆನ್ನುವ ಹಠಮಾರಿತನ ಕೊರವ ನದು. ಸಮತಾ ಸಮಾಜದಲ್ಲಿ ಅದು ನ್ಯಾಯವಲ್ಲಾ ಎಂದು ಅವನಿಗೆ ತಿಳಿಸಲು ಅಸಾಧ್ಯ!

* * *

ಹೊಸ ಮೋಟಾರುಗಳ ಮುಂದೆಲೆಯನ್ನು ಎತ್ತಿದರೆ, ಒಳಗೆ ರಿಪೇರಿ ಮಾಡಲು ಸಾಧ್ಯ. ಇಂತಹ ನಾಲ್ಕು ಗಾಡಿಗಳನ್ನು ಗ್ಯಾರೇಜಿನಲ್ಲಿ ನೋಡಿದರೆ, ಅಲ್ಲಿನ ಕೆಲಸಗಾರರ ವಿಳಂಬನವನ್ನು ಕಂಡರೆ, ಮೋಟಾರುಗಳೂ ಕೂಡ ಆಕಳಿಸುತ್ತಾ ಸುಸ್ತಾಗಿ ಬೇಸರವಾಗಿ ಬಿದ್ದಿವೆಯೋ ಎನ್ನಿಸುತ್ತೆ.

ಹಾಗಾಗಿತ್ತು ಆ ಸಂಜೆ, ಕೊರವ ಬರುವ ಹೊತ್ತಿಗೆ, ಕ್ಲಬ್ಬಿಗೆ. ಮೇಜಿನ ಸುತ್ತಲೂ ಇದ್ದ ನಾವೈವರೂ ಒಮ್ಮೆಗೇ, ಒಮ್ಮತದಿಂದಲೋ ಎಂಬಂತೆ, ಸಮ್ಮತಿ ಯಿಂದಲೇ ಎಂಬಂತೆ, ದೊಡ್ಡದಾಗಿ ಬಾಯಿ ತೆರೆದು ಆಕಳಿಸಿದೆವು. ಕೊರವ ಎರಡು ಚಿಟಿಕೆಗಳನ್ನು ಮುಚ್ಚಿದ್ದ ತನ್ನ ಬಾಯಿ ಮುಂದೆ ಹೊಡೆದ. ನಂತರ ಖಾಲಿಯಿದ್ದ ಕುರ್ಚಿಯ ಕೈಮೇಲೆ ಅನುಕೂಲವಾಗಿ ಅರೆ ಕುಳಿತ.

"ಯಾಕ್ರೋ! ಅಷ್ಟು ಬೇಜಾರು! ಬೇಸರ ಕಳೆಯೋಕೆ ಕ್ಲಬ್ಬಿಗೆ ಬಂದೂ ಬೇಜಾರು ಪಡುತ್ತೀರಲ್ಲೋ! ಏನ್ರೋ ಕಾರಣ! ಮಾತಿಗೆ ಸಾಕಷ್ಟು ರೈಲ್ವೆ ಅಪಘಾತಗಳಾಗುತ್ತಿವೆ. ಮಂತ್ರಿ ಸಂಪುಟಗಳಾಗಿವೆ. ಮಾಜಿ, ಹಾಲಿ, ಇವರುಗಳ ಭಾಷಣ ಇವರುಗಳನ್ನು ಕುರಿತು ಹಾಲೊಡೆಸುವಂತಹ ಲೇಖನಗಳು ಬರುತ್ತಿವೆ. ಅತ್ತ ಸೂಯಜ್. ಇತ್ತ ಹಂಗೆರಿ. ಈ ರೀತಿ ಲೋಕದಲ್ಲೇ ಬಿಸಿಬಿಸಿ ಸುದ್ದಿಗಳಾಗಿವೆ. ಆದರೂ ಏಕ್ರೋ ಬೇಜಾರು" ಎಂದು ಕೇಳಿದ.

ನಾವು ಸುಮ್ಮಗೇ ಇದ್ದೆವು. ಬೇಸರದ ಕಾರಣ ನಮಗೆ ಗೊತ್ತಿದ್ದರಲ್ಲವೇ?

ಜೇಬಿನಿಂದ ಕೊರವ ಕಡ್ಡಿಪೆಟ್ಟಿಗೆ ತೆಗೆದ. ನಾಲ್ಕು ಕಡ್ಡಿಗಳನ್ನು ಸಮಸಮ ನಾಗಿ ಮೇಜಿನಮೇಲೆ ಮಲಗಿಸಿದ. "ಎಲಾ! ಇವನ! ಈಗೇನು ಮಾಡಾನು" ಅಂತ ಕುತೂಹಲ ಕೆರಳಿದ ನಾವು ಎಚ್ಚರದಿಂದ ನೋಡಹತ್ತಿದೆವು, ಕುರ್ಚಿಯ ಮುಂದರ್ಧದಲ್ಲೇ ಕುಳಿತುಕೊಂಡು. ಇನ್ನೂ ನಾಲ್ಕು ಕಡ್ಡಿಗಳನ್ನು ಒಂದರ ಮೇಲೊಂದರಂತೆ ನಿಲ್ಲಿಸಿದ. ಅವು ಹಾಗೇ ನಿಂತುಕೊಂಡವು. ಈ ರೀತಿ ಕಡ್ಡಿಯ ಮನೆಯನ್ನೇ ಕಟ್ಟಿದ.

ಲೋಕದ ಸುದ್ದಿಗಳಾವುದರಿಂದಲೂ ಬೇಸರ ಹೋಗದ ನಮಗೆ ಈ ಕಡ್ಡಿ ಯಕ್ಷಿಣಿ ಆಶ್ಚರ್ಯವನ್ನುಂಟುಮಾಡಿ ಚಕಿತಗೊಳಿಸಿತು. ಸಮ್ಮತ ಹೊಡೆದವರಂತೆ ಕೊರವನ ಕಡೆ ನೋಡಿದೆವು. ಕಡ್ಡಿಪೆಟ್ಟಿಗೆಯ ಆ ತಳವನ್ನು ತೋರಿಸಿದ. "ಯಕ್ಷಿಣಿ ಕಡ್ಡಿಪೆಟ್ಟಿಗೆ" ಎಂದಿತ್ತು. ಮನೆಯನ್ನು ಕಟ್ಟಲು ಸಹಾಯವಾಗುವಂತಹ ಕಡ್ಡಿ ಗಳಿಂದಲೇ ಆ ಪೆಟ್ಟಿಗೆ ತುಂಬಿತ್ತು.

ಈಗ ಬೇಸರ ಹೋಯ್ತೋ ಎಂದೆ. ಕಣ್ಣುಕಟ್ಟುಮಾಯ ಮಾಡಿದರೆ ಬೇಜಾರು ಹೋಗೋದು. ನಡೆದ ಸುದ್ದಿ ಸಪ್ಪೆಯೋ ಕಣೋ! ಎಂದ ಕೊರವ.

——o——

ಸತ್ಯನಾರಾಯಣಸ್ವಾಮಿಯ ಪೀಕಲಾಟ

ಬೈಸ್ಯಾಂಟಿಯಂ ಸಾಮ್ರಾಜ್ಯ ಬಿದ್ದುಹೋದ ಕಥೆ ಕೇಳಿದ್ದೀರ ತಾನೆ? ಆ ಸಂದರ್ಭದಲ್ಲಿ ನಡೆದ ಕೊನೆಯ ಭೀಕರ ಕಾಳಗಕ್ಕೆ ಸ್ವಲ್ಪಹೊತ್ತು ಮುಂಚೆ ಇತ್ತ ತುರುಕರು ಶತ್ರುಗಳನ್ನು ನಿರ್ನಾಮ ಮಾಡುವ ಸಾಮರ್ಥ್ಯಕೊಡು ಎಂದು ಅಲ್ಲಾನಲ್ಲಿ ಮೊರೆಯಿಟ್ಟರೆ, ಅತ್ತ ಚಕ್ರವರ್ತಿಯ ಪಾಳಯದಲ್ಲಿ ಅಷ್ಟೇ ಭಕ್ತಿಯಿಂದ ಜಯವನ್ನು ದಯಪಾಲಿಸು ಎಂದು ದೇವರಲ್ಲಿ ಮೊರೆಯಿಟ್ಟರು. ಎರಡು ಕಡೆಯುವ ರದೂ ಉತ್ಕಟವಾದ ಹೃದಯ ತುಂಬಿ ಬಂದ ಪ್ರಾರ್ಥನೆ. ಸರ್ವಶಕ್ತನಿಗೆ ಆಗ ತುಂಬ ಪೀಕಲಾಟಕಿಟ್ಟುಕೊಂಡಿರಬೇಕು. ಆಗಲಂತೇನು, ದೇವರಿಗೆ ಈ ಮಾದರಿ ಫಜೀತಿ ದಿನದಿನವೂ ಒದಗುತ್ತದೆ. ಮೊನ್ನೆ ಸತ್ಯನಾರಾಯಣಸ್ವಾಮಿಗೆ ಅಂಥಾದ್ದೇ ಸಮಸ್ಯೆ ಎದುರಾಯಿತು.

ಶಿಂಗ್ರಯ್ಯ—ಸಾಹುಕಾರ—ಭರ್ಜರಿ ಸತ್ಯನಾರಾಯಣ ಪೂಜೆ ಮಾಡಿಸಿದ. ಫಲ, ಪುಷ್ಪ, ನಾಲ್ಕು ನಾಲ್ಕು ದೊನ್ನೆ ಪ್ರಸಾದ ಹಂಚಿಸಿದ. ಒಂದೇ ಕೊರತೆ ಯೆಂದರೆ ಜಾಗದ್ದು. ಬಂದ ಅಥಿತಿಗಳಿಗೆ ಕೂರಲು ಜಾಗವೇ ಇಲ್ಲ. ಮನೆಯೇನು ಚಿಕ್ಕದಲ್ಲ. ಆದರೆ ಮನೆ ತುಂಬ ಅಂಗಡಿ ಸಾಮಾನುಗಳ ಪೆಟ್ಟಿಗೆಗಳು ಪಾರ್ಸೆಲು ಗಳು ರಾಶಿರಾಶಿಯಾಗಿ ಬಿದ್ದಿದ್ದವು. ಕೈರೋವಿಗೆ ಮಾತ್ರವಲ್ಲ, ಶಿಂಗ್ರಯ್ಯನಿಗೂ ಯುದ್ಧದ ಬಿಸಿ ತಾಗಿತ್ತು. ಸೂಯೆಜ್ ಕಾಲುವೆ ರಿಪೇರಿಗೆ ಆರು ತಿಂಗಳು ಬೇಕಾಗಬಹುದೆಂಬ ಸುದ್ದಿ ಬಂದ ಕೂಡಲೆ ಶಿಂಗ್ರಯ್ಯನ ಸರಕುಗಳೆಲ್ಲ ಅಂಗಡಿ ಗೌಡೌನ್ ಬಿಟ್ಟು ಮನೆ ಸೇರಿದವು. ಅಂದ ಮೇಲೆ ಶಿಂಗ್ರಯ್ಯ ಪೂಜೆಯಾದ ಮೇಲೆ ಸತ್ಯನಾರಾಯಣ ಸ್ವಾಮಿಗೆ ಅಡ್ಡಬಿದ್ದು ಐದು ನಿಮಿಷ ಏನಂತ ಪ್ರಾರ್ಥಿಸಿದ ನೆಂದು ಹೇಳಬೇಕಾಗಿಲ್ಲ. "ಏನಪ್ಪ ಯುದ್ಧ ಮುಂದುವರಿಯಬಹುದೋ ಎಂದು ಆಶಾದಾಯಕವಾಗಿ ಆತ ಕೇಳುವಾಗಲೇ ಅವನ ಮಿತ್ರ ಗೋಪಣ್ಣನಿಗೆ ಶಿಂಗ್ರಯ್ಯನ ಸತ್ಯನಾರಾಯಣ ಪೂಜೆ ಅರ್ಥವಾಗಿರಬೇಕು.

ಸರಿ. ಗೋಪಣ್ಣನೂ ಒಂದು ಸತ್ಯನಾರಾಯಣ ಪೂಜೆ ಮೊನ್ನೆ ಮಾಡಿಸಿದ. ಹತ್ತು ಮಂದೀನ ಕರೆದಿದ್ದ. ಪೂಜೆ ಆದ ಮೇಲೆ ಎಲ್ಲರಿಗೆ ಕೇಳುವಂತೆ ಘಟ್ಟಿಯಾಗಿ "ಸ್ವಾಮಿ, ಈ ಹಾಳು ಯುದ್ಧ ನಿಲ್ಲಿಸು. ನಮ್ಮೂರ ಅಂಗಡಿಗಳ ಸಾಮಾನುಗಳು

ಅಂಗಡೀಲೇ ಉಳಿಯಲಿ. ಸಂದುಗೊಂದು ಸೇರಿಕೊಂಡು ನನ್ನಂಥವರ ಕಣ್ಣಿಂದ ತಪ್ಪಿಸಿಕೊಳ್ಳುವಂತಾಗದಿರಲಿ...." ಎಂದು ಘಟ್ಟಿಯಾಗಿ ಪ್ರಾರ್ಥಿಸಿ ಸ್ವಾಮಿಗೆ ಅಡ್ಡ ಬಿದ್ದ. ನೆರೆದಿದ್ದವರೆಲ್ಲಾ ಮನಸಾ ಅದನ್ನು ಅನುಮೋದಿಸಿ ಪ್ರಾರ್ಥಿಸಿದರು. ಶಿಂಗ್ರಯ್ಯ ಹಾರ್ಡ್‌ವೇರ್ ಖರೀದಿಗೆಂದು ಮುಂಬಯಿಗೆ ತೆರಳಿದ್ದನಾದ್ದರಿಂದ ಆ ದಿನ ಬರಲಾಗಲಿಲ್ಲ.

ಅಂತೂ ಸತ್ಯನಾರಾಯಣನಿಗೆ ಎರಡು ಪ್ರಾರ್ಥನೆಗಳು ಸಂದಿವೆ. ಶಿಂಗ್ರಯ್ಯನದೊಂದು; ಗೋಪಣ್ಣನದೊಂದು. ಸ್ವಾಮಿಗೆ ದೊಡ್ಡ ಪೀಕಲಾಟ. ಯಾರದನ್ನು ನಡೆಸಿಕೊಡುತ್ತಾನೋ ನೋಡಬೇಕು.

....ರಾಮಿ.

ಎಣ್ಣೆ ಶೀಗೆ

ಶೀಲವಂತರೆಲ್ಲರೂ ಬುದ್ಧಿವಂತರಾದರೆ
ಬುದ್ಧಿವಂತರೆಲ್ಲರೂ ಶೀಲತನದಿ ನಡೆದರೆ
ದೇಶವೆಷ್ಟು ಸುಖಮಯ ಲೋಕನಾಕವೆನಿಪುದು!
ಶೀಲ, ಬುದ್ಧಿ, ಎಣ್ಣೆಶೀಗೆ! ಒಬ್ಬರಲ್ಲಿ ನೆಲೆಸವು!
ದಡ್ಡ ಮಂಕ ಪೆದ್ದ ಮಡೆಯ, ಇವರೆ ಶೀಲವಂತರು,
ಜಾಣರೆಲ್ಲ ಮೋಸ ಕಪಟದಾರಿ ಹಿಡಿವರು
ಬುದ್ಧಿ ಇದ್ದು ಶೀಲಗಳಿಸೆ ತ್ಯಾಗಬೇಕುದು,
ಶೀಲವಿದ್ದು ಜಾಣನಾಗೆ, 'ಯೋಗ' ಬೇಕುದು.

—ಕಾಮತ್.

ಅಖಿಲ ಕಳ್ಳರ ಸಮ್ಮೇಳನ

ಜುಗ್ಗಸಂದ್ರದ ತೋಪಿನಲ್ಲಿ ಈ ಸಾರಿ ಅಖಿಲ ಕಳ್ಳರ ಸಮ್ಮೇಳನ ನಡೆಯಬೇಕೆಂದು ಅಧ್ಯಕ್ಷ ಕನ್ನೋಜಿಯವರು ಎಲ್ಲಾ ಸಿದ್ಧತೆಗಳನ್ನೂ ಮಾಡಿದ್ದರು. ದೇಶಾದ್ಯಂತದಿಂದ ಪ್ರತಿನಿಧಿಗಳು ಬಂದು ಕೂಡಿದ್ದರು. ಮಧ್ಯಾಹ್ನ ೩ ಗಂಟೆಗೆ ಸಮ್ಮೇಳನಾರಂಭವಾಗಬೇಕು. ೨–೫೫ ಆಗಿದೆ. ಅಧ್ಯಕ್ಷರು ತರಪರಗುಟ್ಟುತ್ತಿದ್ದಾರೆ. ಕಾರ್ಯದರ್ಶಿ ಮತ್ತು ಖಜಾಂಚಿ ಇಬ್ಬರೂ ಇನ್ನೂ ಬಂದೇ ಇಲ್ಲ! ೨–೫೭ ಆಯಿತು. ಎಲ್ಲಿಂದಲೋ ಒಂದು ಮೋಟಾರು ಬರುವ ಶಬ್ದ ಕೇಳಿಸಿತು. ತೋಪಿನಲ್ಲಿದ್ದವರೆಲ್ಲಾ ರಸ್ತೆಯ ಕಡೆಗೆ ಕಣ್ಣು ಹೊರಳಿಸಿದರು. ೨-೫೮ ಪೋಲೀಸ್ ವ್ಯಾನ್ ಒಂದು ಬಂದು ನಿಂತಿತು. ನಮ್ಮ ಸಮ್ಮೇಳನಕ್ಕೆ ಈ ವ್ಯಾನಿನಲ್ಲಿ ಯಾಕೆ ಬಂದರು, ಎಂದು ಪ್ರತಿನಿಧಿಗಳು ಅಧ್ಯಕ್ಷರೂ ಒಂದು ಕ್ಷಣ ಬೇಸ್ತುಬಿದ್ದರು. ಮರುಕ್ಷಣದಲ್ಲಿ ವ್ಯಾನಿನಿಂದ ಸಮ್ಮೇಳನದ ಕಾರ್ಯದರ್ಶಿ ಮತ್ತು ಖಜಾಂಚಿ ಇಳಿದರು. ಅಧ್ಯಕ್ಷರಿಗೆ ತಾವು ತಂದಿದ್ದ ಹೂವಿನ ಹಾರವನ್ನು ಹಾಕಿದರು. ನಂತರ "ಅಧ್ಯಕ್ಷರೇ! ಮತ್ತು ಸಹಸದಸ್ಯರೇ! ಅಧ್ಯಕ್ಷರ ಹಾರ ತರಲು ಬೆಳಿಗ್ಗೆ ಮರೆತ ಕಾರಣ ಮಧ್ಯಾಹ್ನ ತಿರುಗಿ ಬೆಂಗಳೂರಿಗೆ ೧ ಘಂಟೆಗೆ ಹೋಗಬೇಕಾಯ್ತು. ಅಲ್ಲಿ ಹೂವಿನ ಹಾರವನ್ನು ತೆಗೆದುಕೊಂಡಿದ್ದೂ ಆಯಿತು. ಆದರೆ ಹಿಂತಿರುಗಿ ಬರಲು ಬಸ್ ವೇಳೆ ಆಗಿಹೋಗಿತ್ತು. ಕಾಸುಕೊಟ್ಟು ಟ್ಯಾಕ್ಸಿ ಮಾಡಿಕೊಂಡು ಬರುವುದು ನಮ್ಮ ಕಸುಬಿಗೇ ಕಳಂಕ ಎಂದು ತೋಚಿತು. ಪೋಲೀಸ್ ಸ್ಟೇಷನ್ನಿನ ಎದುರಿಗೆ ನಿಂತಿದ್ದ ಪೋಲೀಸ್ ವ್ಯಾನೇ ನಮಗೆ ಶ್ರೇಯಸ್ಕರ ಎಂದು ಅನ್ನಿಸಿತು. ನಮ್ಮ ಪುಣ್ಯ ಆ ವೇಳೆಗೆ ವ್ಯಾನಿನ ಡ್ರೈವರು ಎದುರು ಹೋಟಲಿಗೆ ಖೈದಿಯೊಬ್ಬನೊಡನೆ ಕಾಫಿಗೆ ಹೋದ. ಕೂಡಲೇ ನಾವು ವ್ಯಾನಿನಲ್ಲಿ ಕುಳಿತು ಇಲ್ಲಿಗೆ ಬಂದೆವು. ಸುಮಾರು ಹದಿನೈದು ನಿಮಿಷಗಳಾಗಿರಬೇಕು. ನಾವು ವ್ಯಾನನ್ನು ಹೊಡೆದುಕೊಂಡು ಬಂದು. ಇಷ್ಟು ಹೊತ್ತಿಗೆ ಡ್ರೈವರನು ಕಾಫಿ ಮುಗಿಸಿಕೊಂಡು ಹಿಂತಿರುಗಿರುತ್ತಾನೆ. ಇನ್ನು ಮೇಲೇ ಲಬೋ ಲಬೋ ಕೂಗಿರುತ್ತಾನೆ. ಆದ್ದರಿಂದ ನಮ್ಮಲ್ಲಿ ಕಿರಿಯ ಸದಸ್ಯರೊಬ್ಬರು, ಡ್ರೈವಿಂಗ್ ಅರಿತವರು, ಇದನ್ನು ಇಲ್ಲಿಂದ ಮೂರು ಮೈಲಿ ದೂರವಿರುವ ಬೊಗ್ಗುಮಂಗಲದ ಪೋಲೀಸ್ ಸ್ಟೇಷನ್ನಿನ ಎದುರಿಗೆ ನಿಲ್ಲಿಸಿ ಬರಬೇಕು. ಬೊಗ್ಗುಮಂಗಲದ ಪೋಲೀಸ್ ಸ್ಟೇಷನ್ನಿಗೆ ಟೆಲಿಫೋನ್ ಈಗ ಇಲ್ಲ. ನಾವು ಬರುತ್ತಿದ್ದಾಗ ಎಚ್ಚರಿಕೆಯ ಕಾರ್ಯಕ್ರಮವೆಂದು ಆ ಟೆಲಿಫೋನ್ ತಂತಿಯನ್ನು ಕತ್ತರಿಸಿ ಬಂದಿದ್ದೇವೆ" ಎಂದು ಹೇಳಿದರು. ಪ್ರತಿನಿಧಿಗಳಾಗಲು ಹಕ್ಕು ಬರಬೇಕಾದರೆ, ಜಟ್ಕಾ

ಓಡಿಸುವುದು, ಕಾರು ನಡೆಸುವುದು ಕಲಿತೇ ಇರಬೇಕು. ಅಂದಮೇಲೆ ನಾವು ಯಾರು ಬೇಕಾದರೂ ಈ ಕೆಲಸ ಮಾಡಬಲ್ಲೆವು ಎಂದು ಒಕ್ಕೊರಲಿನಿಂದ ಕೂಗೆದ್ದಿತು. ಕಡೆಗೆ ಅಧ್ಯಕ್ಷರು ಸಣ್ರಂಗಪ್ಪನನ್ನು ಈ ಕೆಲಸಕ್ಕೆ ಆಯ್ಕೆ ಮಾಡಿದರು.

ಈ ಅಮೋಘ ರೀತಿಯಲ್ಲಿ ಶುಭ ಚಿಹ್ನೆಗಳಿಂದ ಅಖಿಲ ಕಳ್ಳರ ಸಮ್ಮೇಳನವು ಮೂರು ಘಂಟೆಗೆ ಸರಿಯಾಗಿ ಪ್ರಾರಂಭವಾಯಿತು.

ಜೇಬುಗಳ್ಳರ ಪ್ರತಿನಿಧಿಯು ಸ್ವಾಗತ ಭಾಷಣಮಾಡಿ, ಈಗ ಕಳ್ಳರ ಕಸಬು ಬಲು ಪ್ರಗತಿ ಹೊಂದಿರುವುದರಿಂದ, ಇನ್ನು ಮೇಲೆ ಹಲವಾರು ಶಾಖೆಗಳನ್ನು ಏರ್ಪಡಿಸಬೇಕು. ಜೇಬುಗಳ್ಳರ ಶಾಖೆ, ಶಿಶುಗಳ್ಳರ ಶಾಖೆ, ಬ್ಯಾಂಕಿನ ಶಾಖೆ, ಕನ್ನಗಾರರ ಶಾಖೆ, ನಂಬಿಕೆ ವಂಚಿಪರ ಶಾಖೆ, ಇತ್ಯಾದಿ. ಈಗ ವಿಸ್ತೃತ ರಾಜ್ಯಗಳಾಗುತ್ತಿರುವಾಗ, ನಮ್ಮ ಕಾರ್ಯಕ್ಷೇತ್ರವೂ ದೊಡ್ಡದಾಗಿದೆ. ಆದುದರಿಂದ ಈ ನನ್ನ ಸಲಹೆಯನ್ನು ಅಧ್ಯಕ್ಷರು ಕೂಲಂಕಷವಾಗಿ ವಿಚಾರಿಸಬೇಕು ಎಂದು ಭಿನ್ನವಿಸಿಕೊಂಡ.

ಅಧ್ಯಕ್ಷರು, ತಮ್ಮ ಭಾಷಣಮಾಡುತ್ತಾ, ಜೇ. ಗ. ಪ್ರತಿನಿಧಿಗಳು ಹೇಳಿದ್ದು ಬರೇ ದಿಟ! ಆದರೆ ಈ ಸಮ್ಮೇಳನವು ಎಲ್ಲ ಕಳ್ಳರ ಸಾಮಾನ್ಯ ಸಮಸ್ಯೆಗಳನ್ನು ಚರ್ಚಿಸಿ, ನಂತರ ಶಾಖೆಗಳನ್ನು ರಚಿಸಿ, ಅವರುಗಳ ಸಲಹೆಗಳನ್ನು ಪಡೆದು, ಮುಂದುವರಿಯಬೇಕು ಎಂದು ಸೂಚಿಸಿದರು.

ಅಷ್ಟು ಹೊತ್ತಿಗೆ ಫಲಾಹಾರ ಸಿದ್ಧವಾಗಿತ್ತು. ಒಮ್ಮತದಿಂದ ಸಮ್ಮೇಳನ ಮುಂದಕ್ಕೆ ಹಾಕಲ್ಪಟ್ಟು ಎಲ್ಲರೂ ಫಲಾಹಾರಕ್ಕೆ ಕುಳಿತರು. ಆಗ ನಡೆದ ಸಂಭಾಷಣೆಗಳಲ್ಲಿ ಮಾದರಿಗೆ ಕೆಲವನ್ನು ಇಲ್ಲಿ ಕೊಟ್ಟಿದ್ದೇವೆ.

"ಸೀಗೇಬೇಲೆ ಕೆಂಪು ಮುಹಡಿಮನೆಗೆ ಕನ್ನಹಾಕಿ ಹೋಗಿ ಮನೆಯ ಜವಾನನನ್ನು ಕುರ್ಚಿಗೆ ಕಟ್ಟಿ ಸಿಕ್ಕಿದ್ದೆಲ್ಲವನ್ನೂ ದೋಚಿಕೊಂಡು ಬರುವಾಗ ಹೊರಗೋಡೆಯ ಮೇಲೆ ೧೩೪೩೨೧೬ ಎಂದು ಬರೆದು ಬಂದಿದ್ದೆ. ಮಿಕ್ಕ ಸೋದರ ಕಳ್ಳರಿಗೆ ಈ ಮನೆಯಲ್ಲಿ ಏನೂ ಸಿಗುಲ್ಲ. ಅಪಾಯ ಇನ್ನು ಮೇಲೆ ಉಂಟು. ನಾಲ್ಕನೆ ಮೆಟ್ಟಲು ಜಾರುತ್ತೆ. ಎಡ ಕಿಟಕಿ ಕಿರ್ರೆನ್ನುತ್ತೆ. ಇತ್ಯಾದಿ ಸಂಜ್ಞೆಯ ನಂಬರುಗಳು.

ಮಾರನೆಯ ದಿನ ಆ ಮನೆಯಾತ ಈ ನಂಬರುಗಳನ್ನು ನೋಡಿ ಏನು ತೋಚಿತೋ ಏನೋ ಅದನ್ನೇ ಬರೆದು R. M. D. C. ಗೆ ಕಳಿಸಿದ. ಅವನಿಗೆ ೩೦ ಸಾವಿರ ರೂ. ಬಂತು!

ಅವನ ಮನೆ ದೋಚಲು ಹೋಗಿ ಒಂದು ವಾರ ಸನ್ನಾಹ ನಡೆಸಿ ನನ್ನ ಪ್ರಾಣವನ್ನೇ ಅಪಾಯಕ್ಕೊಡ್ಡಿದಗಿಸಿ, ಕಷ್ಟಪಟ್ಟ ನನಗೆ ಮೊತ್ತ ಸಿಕ್ಕಿದ್ದು ಎಷ್ಟು ಗೊತ್ತೆ. ಕೇವಲ ನೂರಾ ಹದಿನೈದು ರೂಪಾಯಿ!"

* * *

ಈ ಸಾರಿ ದಸರಾದಲ್ಲಿ ಸಾಕಷ್ಟು ಸುಗ್ಗಿ ದೊರಕಿತಯ್ಯಾ! ನನಗೆ ಸ್ವಲ್ಪ ದೃಷ್ಟಿ ಮಂದವಾಗಿತ್ತು. ಸರಿಯಾದ ಕನ್ನಡಕ ಸಿಕ್ಕಿದರೆ ಸಾಕು ಎಂದು ಮೂರು ವರ್ಷದಿಂದ ಕನ್ನಡಕದ ಕಳ್ಳತನದಲ್ಲೇ ನಿರತನಾಗಿದ್ದೆ. ದಸರಾ ಕಾಫಿ ಹೋಟಲಿನಲ್ಲಿ ಆ ಕಲಗಚ್ಚು ಕುಡಿಯುತ್ತಿದ್ದಾಗ ಎದುರಿಗೆ ಒಬ್ಬರು ಮುದುಕರು ಕನ್ನಡಕವನ್ನು ಮೇಜಿನ ಮೇಲೆ ತೆಗೆದಿಟ್ಟು ಕಣ್ಣೊರೆಸಿಕೊಳ್ಳಲು ಶುರುಮಾಡಿದರು. ಆ ಕನ್ನಡಕವನ್ನು ನಾನು ತೆಗೆದುಹಾಕಿಕೊಂಡೆ. ಎಷ್ಟು ಚೆನ್ನಾಗಿ ಎಲ್ಲಾ ಕಾಣಿಸ್ತು ಅಂತೀರಿ! ಆ ವೇಳೆಗೆ ಆ ಮುದುಕರು ಮೇಜಿನ ಮೇಲೆ ಕೈ ಇಟ್ಟರು. ಅದು ಕಾಫಿ ಲೋಟದೊಳಕ್ಕೆ ಇಳಿಯಿತು. ಬಿಸಿ ತಟ್ಟಿದ ಕೂಡಲೇ ಮುದುಕರು ಕೈ ಸೆಳೆದುಕೊಂಡು "ಅಯ್ಯೋ! ನನ್ನ ಕನ್ನಡಕ ಎಂದು ಮೇಜನ್ನೆಲ್ಲಾ ತಡಕಾಡಿದರು. ಆ ವೇಳೆಗೆ ಅವರಿಗೆ ಅಳುವೇ ಬಂದಿತ್ತು. ಅಲ್ಪ ಸ್ವಲ್ಪ ಕಾಣಿಸುತ್ತಿದ್ದುದೂ ಕೂಡ ಮುಕ್ತಾಯವಾಗಿತ್ತು. ಆಗ ಕನ್ನಡಕ ಹಾಕಿದ ಬೇರೊಬ್ಬ ಆಗಂತುಕ ಎದುರಿಗೆ ಬಂದ. ಅವನ ಮುಖಕ್ಕೆ ಇವರ ಕೈ ತಾಕಿತು. ನನ್ನ ಕನ್ನಡಕ ಎಂದು ಅವನ ಮುಖವನ್ನು ಹಿಡಿದರು. ಎಷ್ಟು ಚೆನ್ನಾಗಿ ಕಾಣಿಸ್ತು ಅಂತೀರಿ!! ಇದೆಲ್ಲಾ! ಇನ್ನು ಇಲ್ಲಿರುವುದು ಅಪಾಯ ಎಂದು ನಾನು ನುಸುಳಿಕೊಂಡುಬಿಟ್ಟೆ."

* * *

"ಸಮತಾ ರಾಜ್ಯ ಬಂದಿದೆ. ಎಲ್ಲ ಕಸುಬಿನವರೂ ಸಂಘಗಳನ್ನೇರ್ಪಡಿಸಿಕೊಂಡು, ಆಳಧಿಕಾರದ ಸರ್ಕಾರದಲ್ಲಿ ಪ್ರಾತಿನಿಧ್ಯ ಬೇಕು ಎಂದು ಚಳುವಳಿ ಹೂಡುತ್ತಿದ್ದಾರೆ. ನಾವೂ ಯಾಕೆ ಹಾಗೆ ಮಾಡಬಾರದು. ನಮ್ಮ ಹಿತ ರಕ್ಷಣೆಗೆ ಸಡಿಲವಾದ ಕಾನೂನು ರಚಿಸುವುದಕ್ಕೆ ನಮ್ಮ ಮಂತ್ರಿಯೇ ಇದ್ದರೆ ಚೆನ್ನಲ್ಲವೇ?

—ಬೇಕೂಫ! ಹಾಗೆಲ್ಲಾದರೂ ಚಳುವಳಿ ಹೂಡುವ ಸಲಹೆ ಎಲ್ಲಾದರೂ ಮಾಡಿಬಿಟ್ಟೀಯೇ ನೀನು! ಈ ಪ್ರತಿನಿಧಿಗಳಲ್ಲಿ ನೂವಾರು ಜನ ಎಳೆನಿಂಬೇಕಾಯಿಗಳಿವೆ. ಸ್ವಾತಂತ್ರ್ಯ, ಹಕ್ಕು, ಹೀಗೆಲ್ಲಾ ಹುಚ್ಚು ಮಾತಾಡೋ ಹಸಿ ತಲೆಯ ಹೈಕಗಳಿವೆ.

ಹಾಗೂ ನಮ್ಮ ಪ್ರತಿನಿಧಿಗಳು ಸಚಿವ ಸಂಪುಟದಲ್ಲಿ ಇರದಿದ್ದರೆ ಈ ಯೋಚನೆ! ಈಗಾಗಲೇ ನಮ್ಮವರು ಅಲ್ಲಿ ಸಾಕಷ್ಟು ಬಲಯುತರಾಗಿ ಇದ್ದೇ ಇದ್ದಾರೆ. ಅವರುಗಳು ರಚಿಸಿದ ಸಡಿಲ ಕಾನೂನಿನಿಂದಲ್ಲವೇ ಎಷ್ಟೋ ಬಾರಿ ನಾವು ನ್ಯಾಯಾಲಯದಿಂದ ನುಸುಳಿ ತಪ್ಪಿಸಿಕೊಂಡಿರುವುದು. ನಾವು ಅವರನ್ನು ಈ ಸಮ್ಮೇಳನದಲ್ಲಿ ಆಯ್ಕೆ ಮಾಡಲಿಲ್ಲ ದಿಟ! ಆದರೆ ನಮ್ಮವರೇ ಆಗಿರುವಾಗ ನಾವ್ಯಾಕೆ ಈ ಹವ್ಯಾಸಕ್ಕೆ ಹೋಗಬೇಕು; ಹಾಗೆ ಹೋದರೆ ನಮ್ಮಲ್ಲೇ ಸ್ಪರ್ಧೆ, ಒಳಸಂಚು, ಮೋಸ ಎಲ್ಲವೂ ಅಲ್ಲಿ ಆಗುವ ಹಾಗೇ ಇಲ್ಲೂ ಶುರುವಾಗುತ್ತೆ.

ದಮ್ಮಯ್ಯ! ನಿನ್ನ ಈ ಆಲೋಚನೆಗೆ ಮುಟ್ಟೆ ಹಾಕು. ಬಾಯಿಗೆ ಬೀಗ ಹಾಕಿಕೋ."

—ಶ. ಕುಮಾರ್.

ಪ್ರಾಣೇಶ ಪ್ರಸಂಗ

ಗಿಳಿಯೆನ ದೀಪಾವಳಿ

ಕೊನೆಗೂ ಪ್ರಾಣೇಶ ದಂಪತಿಗಳು ಪೇಟೆಯಲ್ಲೇ ತಳವೂರುವುವೆಂದು ನಿರ್ಧರಿಸಿದರು. ಬಿಡಾರ ಪ್ರಾರಂಭಿಸುವ ಮೊದಲು ಸಾಕಷ್ಟು ವ್ಯವಸ್ಥೆಯಾಗಬೇಕಲ್ಲ. ಸುಂಟರಗಾಳಿಯಂಥ ಇಬ್ಬರು ಅವಿವಾಹಿತರು, ತುಂಟಾಗ್ರೇಸರ ಒಬ್ಬ ಅಡಿಗೆಯ ಹುಡುಗ–ಇಷ್ಟು ಮಂದಿ ವಾಸಮಾಡಿಕೊಂಡಿದ್ದ ಮನೆ ಯಾವ ಸ್ಥಿತಿಯಲ್ಲಿರಬಹುದೆಂಬುದನ್ನು ಊಹಿಸಿಕೊಳ್ಳಿ. ಅದನ್ನೆಲ್ಲ ಪೂರ್ತಿ ಸರಿಪಡಿಸುವ ಭಾರವನ್ನು ಪ್ರಾಣೇಶ ಪೂರ್ತಿಯಾಗಿ ನನಗೆ ಒಪ್ಪಿಸಲು ಸಮ್ಮತಿಸಲಿಲ್ಲ. ಮಹಾ ಮಹಾ ಮುಖಂಡರು ವಿದೇಶ ಪ್ರವಾಸಕ್ಕೆ ಹೋಗುವ ಸಂದರ್ಭದಲ್ಲಿರುತ್ತದಲ್ಲ ಹಾಗೆ ಒಂದು advance party ಯಾಗಿ ಪ್ರಾಣೇಶ ಒಬ್ಬನೇ ನುಗ್ಗಿ ಬಂದ. "ಲೋ ವಕ್ರ ಮದುವೇಯಾದಮೇಲೆ ಇಷ್ಟು ದಿನವೂ ತಲೆ ಮರೆಸಿಕೊಂಡೆಯೇನೋ" ಎಂದು ಗೆಳೆಯರೆಲ್ಲ ಗುದ್ದಿ ಅವನ ಮದುವೆಯ ಕೋಟನ್ನು ಪುಡಿಮಾಡಿದರು. ಪ್ರಾಣೇಶ 'ತಾಳಿರೋ ತಾಳಿರೋ" ಎಂದಷ್ಟೇ ತೊದಲಿದ.

ಈ ಮನೆ ಬಿಟ್ಟು 'ಹುನ್ನರ್ ನಗರ'ದಲ್ಲಿ ಕೊಂಚ ದೊಡ್ಡ ಮನೆ ನೋಡೋಣವೋ ಎಂದು ಮೆತ್ತಗೆ ಪ್ರಸ್ತಾಪಿಸಿದ ಪ್ರಾಣೇಶ. ಆರೇಳು ರೂಮುಗಳಿರುವ ಈ ಮನೆ ಐದೂ ಚಿಲ್ಲರೆ ಅಡಿಗಳ ಮೂರು ನಾಲ್ಕು ಮಂದಿಗೆ ಬೇಕಾದ ಹಾಗೆ ಸಾಕು. ಆ ಮೇಲೆ ಜನ ಸಂಖ್ಯೆಯಲ್ಲಿ ಅಭಿವೃದ್ಧಿಯಾದಾಗ ನೋಡಿಕೊಳ್ಳೋಣ ಎಂದೆ. ಸದ್ಯ ಇರುವ ರೂಮುಗಳನ್ನು ಒಂದು ರೂಪಕ್ಕೆ ತರುವುದೇ ಮುಖ್ಯ. ಅದಕ್ಕೆ ಗಮನ ಕೊಡೋಣ ಇವತ್ತು ಎಂದು ಸೊಂಟ ಕಟ್ಟಿದೆ ನಾನು. ಪ್ರಾಣೇಶ ತನ್ನ ರೂಮುಗಳನ್ನು ತಾನೆ ಸರಿಪಡಿಸಬೇಕೆಂದು ಹಠ ತೊಟ್ಟದ್ದು ಮಾತ್ರವಲ್ಲದೆ ನಾನು ಪ್ರವೇಶಿಸಕೂಡದೆಂದು ಬೇರೆ ತಾಕೀತು ಮಾಡಿದ. ಮುಂಬಯಿಯಿಂದ ಬಂದು ನನ್ನೊಡನೆ ಸೇರಿಕೊಂಡು ಆ ಎರಡು ಕೋಣೆಗಳನ್ನು ಆಕ್ರಮಿಸಿಕೊಂಡಂದಿನಿಂದ ಪ್ರಾಣೇಶ ಅವುಗಳಲ್ಲಿ ಏನೇನು ತುಂಬಿದ್ದನೋ ಪರಬ್ರಹ್ಮನಿಗೇ ಗೊತ್ತು. ಅದನ್ನು ವರ್ಣಿಸುವುದಂತೂ ಸಾಧ್ಯವಿಲ್ಲ. ಸೂಟ್ ಕೇಸುಗಳು, ಹಳೇ ಬೂಟ್ಸುಗಳು, ಬ್ಯಾಟುಗಳು, ಮಫ್ಲರುಗಳು, ಕ್ಯಾಲೆಂಡರುಗಳು, ನೂರಾರು ಚಿಕ್ಕಪುಟ್ಟ ಖಾಲಿ ಅರ್ಧ ಖಾಲಿ ಶೀಶೆಗಳು, ಕಡಲೆಕಾಯಿಸಿಪ್ಪೆ ಸಿಗರೇಟು ತುಂಡು–ಹೀಗೆ ಊಹಿಸಬಹುದಾದ್ದೆಲ್ಲವೂ ಶಿಸ್ತೆಂಬುದನ್ನು ಧಿಕ್ಕರಿಸಿ ನೆರೆದಿದ್ದವು. ಅಂತೂ ಆ ಕೋಣೆಗಳನ್ನು ಹದಕ್ಕೆ ತರಲು ಪ್ರಾಣೇಶ ದಿನವೆಲ್ಲ ಶ್ರಮಿಸಿದ. ಒಂದು ಡಬ್ಬ ಭರ್ತಿಯಾಗುವಷ್ಟು ಸಿಗರೇಟು ತುಂಡುಗಳು ಸಿಕ್ಕಿದವು. ಗುಜರಿಯವನು ಹೊತ್ತ ಸಾಮಗ್ರಿಗಳಿಂದ ಒಟ್ಟು ಮೂವತ್ತು ರೂಪಾಯಿ ದಕ್ಕಿತು.

ಮೂರನೆ ದಿನ ಸಾಯಂಕಾಲ ನಾನು ಮನೆಗೆ ಬರುವಾಗ ಮನೆಯು ಗುರುತೇ ಸಿಗದಷ್ಟು ಬದಲಾಯಿಸಿತ್ತು. ಹೊಸ ಫರ್ನಿಚರ್ ಬಾಬ್ತುಗಳೆಲ್ಲ ಬಂದು ಅಲ್ಲಲ್ಲಿ ಕುಳಿತಿದ್ದವು. ಎಲ್ಲಿ ನೋಡಿದರೂ ಒಪ್ಪ ಓರಣ. ಪ್ರಾಣೇಶ ರಸಿಕ ಅಂತ ನನಗೆ ಗೊತ್ತು. ಆದರೆ ಅತನ ರಸಿಕತೆ ವ್ಯಕ್ತವಾಗುವುದು ಯಾರಾದರೂ ಒಪ್ಪ ಓರಣ ಮಾಡಿಬಿಟ್ಟರೆ ಮಾತ್ರ ಎಂದು ತಿಳಿದಿದ್ದೆ. ಈಗ ನೋಡಿದರೆ ಹಾಗಲ್ಲ. ಪ್ರಾಯಶಃ ನಾಲ್ಕು ತಿಂಗಳಲ್ಲಿ ಒಳ್ಳೆಯ ಶಿಕ್ಷಣ ಕೊಟ್ಟಿರಬೇಕು ಎಂದುಕೊಂಡೆ "ಭೇಷ್ ಅಂತಾರಪ್ಪ ಯಜಮಾನರು; ಆದರೆ ಸುಣ್ಣ ಬಣ್ಣ ಆಗೋ ಮೊದಲೆ ಇಷ್ಟೆಲ್ಲ ಒಪ್ಪ ಓರಣ ಏಕೆ ಎಂದು ಕೇಳಿದೆ.

"ಸಮಯ ಎಲ್ಲಿದೆ. ನವೆಂಬರ್ ಒಂದಕ್ಕೆಲ್ಲ ಬಿಡಾರ ಪ್ರಾರಂಭಿಸಿ ಬಿಡ ಬೇಕು"– ಅಂತಾನೆ ಪ್ರಾಣೇಶ.

"ಹೌದು ನವೆಂಬರ್ ೧–ದೀಪಾವಳಿ–ಹೊಸ ಅಳಿಯನಿಗೆ ಮನೆ ಬಿಟ್ಟು ಬೇರೆ ಕಡೆ ಹೋಗಿ ಹೊಸ ಬಿಡಾರ ಹೂಡೋದಕ್ಕೆ ಕಳುಹಿಸುತ್ತಾರೆ ಅಲ್ವೆ ನಿನ್ನ ಮಾವ ನವರು ?" ಎಂದು ಎಚ್ಚರಿಸಿದೆ.

"ಓಹೋ ನಾನೇನು ಮಹಾ ಅಳಿಯನಯ್ಯ! ಅತ್ತೆ ಇಲ್ಲ; ಮಾವ ಇಲ್ಲ; ಅಳಿಯತನ ಎಷ್ಟಾದರೂ ಅಷ್ಟೆ!"

"ಆದರೂ ನಿನ್ನ ಹೆಂಡತಿ ಮಾವ ಅಜ್ಜಿ ನಿನ್ನ ಅವತ್ತು ಇಲ್ಲಿಗೆ ಕಳಿಸುತ್ತಾರೆ ನಂಬಿಕೊಂಡಿರು."

"ಹಾಗಂತಿಯೊ? ಹಾಗೆ ನನಗೆ ಬರೋಕಾಗದಿದ್ರೆ ದೀಪಾವಳಿಗೆ ನೀನೇ ಅಲ್ಲಿ ಬಂದು ಬಿಡು"


ಕೊನೆಗೆ ಹಾಗೇ ಆಯಿತು. ನಾನು ಗಿಳಿಯನಾಗಿ ಅಳಿಯನನ್ನು ಹಿಂಬಾಲಿಸಿದೆ.

ಆ ಹಳ್ಳಿಯಲ್ಲಿ ಹಬ್ಬದ ಗುಂಗಿನಲ್ಲಿರುವಾಗಲೂ ನಮಗೆ ಯುದ್ಧದ ಕಾವು ತಟ್ಟಿಯೇ ತಟ್ಟಿತು. ಈಡನ್ ಕ್ರುಶ್ಚೇವಾದಿಗಳು ಈಜಿಪ್ಟ್‌ನಲ್ಲಿ ಮತ್ತು ಹಂಗೇರಿ ಯಲ್ಲಿ ನಡೆಸಿದ ದೀಪಾವಳಿಯ ಮುನ್ಸೂಚನೆ ನನಗಂತೂ ಬಲು ಸ್ಪಷ್ಟವಾಗಿ ದೊರೆಯಿತು. ದೀಪಾವಳಿಗೆ ಎರಡು ದಿನಗಳಿರುವಾಗಲೇ ಮಕ್ಕಳ ಗುಂಪಿನ ನಾಯಕನಾಗಿ ಪಟಾಕಿ ಸುಡುತ್ತಿರುವಾಗ ಒಂದು ಆನೆ ಪಟಾಕಿ ಕೈಯೊಳಗೇ ಸಿಡಿದು ಸಾಕಷ್ಟು ಬೊಕ್ಕೆಗಳೆದ್ದವು. ನಾನಾಗಿ ಕಿರಿಚಿಕೊಂಡಿದ್ದು ಅಲ್ಲಿಂದ ಹೊರಟು ಬರುವ ತನಕವೂ ಮಕ್ಕಳಿಗೂ ಪ್ರಾಣೇಶನಿಗೂ ಒಂದು ನಗೆಯ ವಸ್ತುವಾಯಿತೆಂಬುದೇ ಸಂತೋಷ. ಈಜಿಪ್ಟ್ ಹಂಗೇರಿಗಳಲ್ಲಿ ಪಟಾಕಿ ಸುಟ್ಟವರನ್ನು ಕಂಡು ಕೂಡ ಜಗತ್ತು ನಕ್ಕಿತು. ಆದರೆ ಈಡನ್ನಾದಿಗಳಿಗೆ ಸಂತೋಷವಾಯಿತೋ ಏನೋ ಗೊತ್ತಿಲ್ಲ.

ದೀಪಾವಳಿಯಲ್ಲಿ ಅಳಿಯನನ್ನು ಗೋಳು ಹುಯ್ದುಕೊಳ್ಳುವುದುಂಟು. ಆದರೆ ಮೊನ್ನೆ ತದ್ವಿರುದ್ಧವಾಗಿ ಗಿಳಿಯನಿಗೆ ನಾನಾ ತರದ ಕೀಟಲೆಯುಂಟು ಮಾಡಿದರೆಂಬುದೇ ವಿಶೇಷ. ಅಂತೂ ಈಗಿನ ಕಾಲದಲ್ಲಿ ಮೆಜಾರಿಟಿಯಿದ್ದರೆ ಏನೂ ಮಾಡೋದಕ್ಕಾಗುತ್ತೆ ಎಂಬುದೇ ಸಿದ್ಧವಾಯಿತು.

ಕೊನೆಯದಾಗಿ ಒಂದು ಬಾತ್ಮಿ. (ಯಾವ ಪೇಪರಲ್ಲೂ ಬಾರದಿದ್ದದ್ದು). ನವಂಬರ್ ೧ ನೇ ದಿನಾಂಕ ಪ್ರಾಣೇಶ ಕರ್ಣಾಟಕ ರಾಜ್ಯೋದಯದ ನಿಮಿತ್ತ ನಾಲ್ಕಾರು ಉಪನ್ಯಾಸ ಕೊಟ್ಟಿದ್ದಾನೆ. ಶ್ರೋತೃಗಳ ಸಂಖ್ಯೆ ಮಿತಗೊಳಿಸಲ್ಪಟ್ಟಿತ್ತು. ಅಂದರೆ ನಾನು ಮತ್ತು ಅವನ ಹೆಂಡತಿಗೆ ಮಾತ್ರ ಉಪನ್ಯಾಸ ಸಾಯಂಕಾಲ ಕೆರೆ ಏರಿ ಮೇಲೆ ಅಡ್ಡಾಡುವುದಕ್ಕೆ ಹೋಗಿದ್ದಾಗ ಪ್ರಾಣೇಶ 'ಉದಯವಾಯಿತು' ಹಾಡಿದಾಗ ನಾವು ಕಿವಿ ಮುಚ್ಚಿಕೊಂಡು ಕೇಳಿದೆವು; ರೇಡಿಯೋದಲ್ಲಿ 'ಕಾಸ್ಮೋ' ಗುಳಿಗೆಗಳ ಪ್ರಚಾರವನ್ನು ಕೇಳುತ್ತೇವಲ್ಲ ಹಾಗೆ.

— ರಾಮಿ.



ಇನಾಂದಾರಿ ರದ್ದಾಯ್ತು ಬೋರಾ! ಇನ್ನು ಮೇಲೆ ನೀನು ನನ್ನನ್ನ ಮ್ಯಾನೇಜರಾಗಿ ಕೆಲಸಕ್ಕಿಟ್ಕೊಳ್ಳಬೇಕು !!

ಅಭಿನವ ಕವಿ!

ಏನಾದರೂ ಬರೆಯಬೇಕೆಂದು ತಲೆಕೆರೆದು
ಕುಳಿತು ಕೊಳ್ಳುವನೆಲ್ಲ ಮರೆತು ಕವಿಯು;
ಒಮ್ಮಿದ್ದೊಮ್ಮೆಲೆ ಹೊಳೆದ ಯೋಚನೆಯ ಬರೆಯಲ್ಕೆ
ಹುಡುಕುವನು ಮನೆಯೆಲ್ಲ ಲೇಖನಿಯನು.

ಲೇಖನಿಯು ಸಿಗದಿರಲು ಕೋಪದಿಂದುರಿಯುತ್ತ
ಕಿಡಿಗೇಡಿ ಮಕ್ಕಳನ್ನು ಹೊಡೆದು ಅಳಿಸಿ;
'ಊಟಕೇಳಿರಿ' ಎಂದು ಕರೆದ ಪತ್ನಿಯ ಗಲ್ಲ-
ವನು ಚಿವುಟಿ, ಬಾಯ್ಗೆ ಬಂದುದ ಬಯ್ಯುವಂ!

ತನ್ನ ಕಿಸೆಯೊಳಿ 'ಪೆನ್ನು' ಇರುವುದಂ ಕಂಡವನು
ಆಶ್ಚರ್ಯಪಟ್ಟು ಸಂತೋಷದಿಂದಾಗ—
ಬರೆಯ ಹೋಗಲು ತಾನೆ, ಬರುವದಾದರು ಏನು?
ಮರೆತು ಹೋದುದು 'ಪೆನ್ನ' ಹುಡುಕುವಾಗ!

ಈ ಹಾಳ್ ವಿಚಾರದಿಂ ತಲೆ ಕೆಡುವುದೇ ಹೊರತು
ಹೊಟ್ಟೆ ತುಂಬುವುದೇ? ಎಂದರಿತುಕೊಂಡು
ಹಸಿವ ಹಿಂಗಿಸಲೆಂದು ಅಡುಗೆ ಮನೆ ಸೇರಿರಲು
ಮೂಲೆಯೊಳು ಅಳುವ ಹೆಂಡತಿಯ ಕಂಡು,

ಆಕೆಯನು ರಮಿಸಲಾಗದೆ, ಶಬ್ದವಿಲ್ಲದಲೆ
ಪೇಚಾಡಿ, ಸಿಟ್ಟಾಗಿ ಬಯ್ದಾಡುವಂ!
ಹೊಟ್ಟೆ ತುಂಬಿದ ಸಮಾಧಾನ(!) ದಿಂ ಹೊರಡುವನು
ಸೋಮಾರಿ ರಸಿಕರನು ಹುಡುಕುತ್ತವಂ!

ಕೂಡಿದ ಜ್ಞಾನಿ(!) ಗಳ ಬಳಿ ಗೊಳ್ಳು ಹರಟೆಯನು
ಹೊಡೆವನೆಲ್ಲವ ಬಲ್ಲ ಪಂಡಿತನಂತೆ!
ಸಿಕ್ಕಿಸಿಕ್ಕ ಪದಗಳನು ಎಂತೆಂತೊ ಬಳಸುತ್ತ
ಬರೆದು ಹೇಳುವ-'ಇದೋ! ನಮ್ಮ ಕವಿತೆ.!'

—ಪುರುಷೋತ್ತಮ.

ನಿಮಗಾಗಿ

ನಮ್ಮ ಭಾರತದ ಭೂಪಠ ಬದಲಾವಣೆಯಾಯ್ತು. ಕನ್ನಡ ಮಾತನಾಡುವ ವರಿಗೆಲ್ಲಾ ವಿಶಾಲ ಮೈಸೂರು ನಿರ್ಮಾಣವಾಯ್ತು. ಈಗ ಒಂದೆರಡು ತಿಂಗ ಳಿಂದಲೂ ಸಾಹಿತಿಗಳು, ಕವಿಗಳು, ರಾಜಕಾರಣಿಗಳು ನಮ್ಮ ನಾಡಿನ ಬಗ್ಗೆ ಓದುಗ ರಿಗೆ ಅಜೀರ್ಣವಾಗುವಷ್ಟು ಸಾಹಿತ್ಯ, ಕವಿತೆ, ರಾಜಕೀಯ ವಿಚಾರಗಳನ್ನು ಒದಗಿ ಸುತ್ತಿದ್ದಾರೆ. ನಾನು ಸಾಹಿತಿಯೂ ಅಲ್ಲ, ಕವಿಯೂ ಅಲ್ಲ, ರಾಜಕಾರಣಿಯೂ ಅಲ್ಲ. ಆದ್ದರಿಂದ ನಿಮಗೂ ಕ್ಷೇಮ, ನನಗೂ ಕ್ಷೇಮ. ಆದರೆ ನಾನು ಸುಮ್ಮನೆ ಕುಳಿತಿರಲು ಸಾಧ್ಯವಿಲ್ಲ. ಜನರು ನನ್ನದೂ ಒಂದು ಉಪದೇಶಕ್ಕಾಗಿ ಹಾತೊರೆಯು ತ್ತಿದ್ದಾರೆ. ಆದ್ದರಿಂದ—ಇಕೋ—

ಇದುವರಿವಿಗೂ ನಮ್ಮ ಮೈಸೂರಿಗೆ ಸಮುದ್ರ ತೀರವಿರಲಿಲ್ಲ. ಈಗ ನಮಗೆ ಅರೇಬಿಯನ್ ಸಮುದ್ರ (ಅಥವಾ ಬಂಗಾಳಾ ಕೊಲ್ಲಿಯೋ?) ಸಿಕ್ಕಿದೆ. ಸಮುದ್ರ ದಲ್ಲಿ ಕೋಟ್ಯಾಂತರ ಮೀನುಗಳು ನಮ್ಮದಾಗಿ ಬಂದಿವೆ. ನಮ್ಮ ದೇಶದ ಆಹಾರ ಸಮಸ್ಯೆಯನ್ನು ಪರಿಹರಿಸಬೇಕಾದರೆ ನಾವೆಲ್ಲರೂ ಮತ್ಸ್ಯಾಹಾರಿಗಳಾಗಬೇಕಾದುದು ಅನಿವಾರ್ಯವೆಂದು ಎಲ್ಲರಿಗೂ ತಿಳಿದೇ ಇದೆ. ಈಗ ನಾವು ಯಾರ ಹಂಗೂ ಇಲ್ಲದೆ ಮತ್ಸ್ಯಾಹಾರ ಶುರು ಹಚ್ಚಿಕೊಳ್ಳಬಹುದು. ನಮ್ಮ ಪ್ರಾಂತ್ಯದಲ್ಲಿ ಮೀನಿನ ಕೈಗಾರಿಕೆಗೂ ಒಂದು ಖಾತೆ—ಆಡಳಿತದಲ್ಲಿ ನಿರ್ಮಾಣವಾಗಿದೆ. ನಾಡಿನ ಪ್ರತಿ ಯೊಬ್ಬ ಪ್ರಜೆಯೂ ಮೀನಿನ ವಿಷಯದಲ್ಲಿ ಆಸಕ್ತನಾಗಬೇಕು. ಮೀನು ಹಿಡಿಯುವು ದನ್ನು ಕಲಿಯಬೇಕು. ತಿಂದು ಜೀರ್ಣಿಸಿಕೊಳ್ಳುವುದನ್ನು ಅರಿಯಬೇಕು. ಇದೇ ಹಿನ್ನೆಲೆಯಿಂದಲೇ ನಾನು ನಮ್ಮ ಕೊರವಂಜಿಯ ಶಿಷ್ಯ ವರ್ಗಕ್ಕೆ ಈ ಸೇವೆ ಸಲ್ಲಿ ಸುತ್ತಿದ್ದೇನೆ.

ಮೀನು—ನಮ್ಮ ಭಗವಂತನ ಪ್ರಪ್ರಥಮ ಅವತಾರ. ಈಗ ಪ್ರಪಂಚದಲ್ಲಿ ಆಗುತ್ತಿರುವ ರಾಜಕೀಯ ಹೋರಾಟಗಳು ಮುಂದುವರಿದು ಪ್ರಳಯವಾದಾಗ ಕಾಲ ಚಕ್ರ ಉರುಡಿ—ಪುನಃ ಮತ್ಸ್ಯಾವತಾರ ಆಗಲೇಬೇಕು. ಆಗ ನಾವೆಲ್ಲರೂ ಮತ್ಸ್ಯ ರಾಗುತ್ತೇವೆ. ಈಗಾಗಲೇ ಸಮುದ್ರದಲ್ಲಿ ಮೀನುಗಳ ಸಂಖ್ಯೆ ವಿಪರೀತ ಹೆಚ್ಚಿದೆ. ಅದಕ್ಕಾಗಿ ನಾವು ಅವುಗಳನ್ನು ಭಕ್ಷಿಸಲೇಬೇಕು. ಇಲ್ಲದಿದ್ದಲ್ಲಿ ಅವು ಹತೋಟಿ ತಪ್ಪಿ ಸಮುದ್ರವನ್ನೆಲ್ಲಾ ಆಕ್ರಮಿಸಿ ಭೂಮಿಗೆ ಧಾವಿಸಿ ನಮ್ಮನ್ನೇ ಭಕ್ಷಿಸಿಯಾವು!

ಹಾಗೆ ಒಂದುವೇಳೆ ಆದರೆ—ಅದೇ "ಮತ್ಸ್ಯಪ್ರಳಯ". ಆ ದುರಂತವನ್ನು ನಾವು ತಪ್ಪಿಸಲೇಬೇಕು. (ಮೀನುಗಳಲ್ಲಿ ಮಿತ ಸಂತಾನ ಯೋಜನೆಯನ್ನು ಬೋಧಿಸಿ ಅವುಗಳ ಸಂಖ್ಯೆಯನ್ನು ಹತೋಟಿಗೆ ತರಬಹುದು. ಆದರೆ—ಮಿತ ಸಂತಾನ ಯೋಜನೆ ಮೊದಲು ಜನರಲ್ಲಿ ಯಶಸ್ವಿಯಾದ ಹೊರತು ಮೀನುಗಳು ಆ ಯೋಜನೆ ಯನ್ನು ಸ್ವೀಕರಿಸಲಾರವು.)

ಮೀನಿನ ವಿಷಯದಲ್ಲಿ ಬರೆಯಲು ನನಗೆ ಇರುವಷ್ಟು ಅರ್ಹತೆ ಬಹಳ ಜನಕ್ಕಿಲ್ಲ. ನನ್ನನ್ನು ಮೊಟ್ಟಮೊದಲು ಪ್ರಪಂಚಕ್ಕೆ ತಂದ "ಮಿಡ್ ಬಾಯಮ್ಮ"ನ ಹೆಸರು ಮೀನಲೋಚನಮ್ಮ. ನನಗೆ ಇಪ್ಪತ್ತು ವರ್ಷ ತುಂಬುವವರಿವಿಗೂ ಮೀನೆಣ್ಣೆ ಕುಡಿದು ಬೆಳೆದೆ—ಈಗ ನನಗೆ ಎಲ್ಲಿ ಪೆಟ್ಟಾದರೂ ಮೀನೆಣ್ಣೆ ಹೊರಕ್ಕೆ ಚಿಮ್ಮುತ್ತೆ—ರಕ್ತವಲ್ಲ. ನನಗೆ ಗಂಟುಬೀಳುವುದರಲ್ಲಿದ್ದ ಮೊಟ್ಟಮೊದಲನೆಯ ಹೆಣ್ಣಿನ ಹೆಸರು—ಮೀನಾಕ್ಷಿ. ಬುದ್ಧಿವಂತೆ—ನನ್ನಿಂದ ತಪ್ಪಿಸಿಕೊಂಡು ಹೋಗಿ—ಈಗ ಸುಖ ವಾಗಿದ್ದಾಳೆ. ಇಷ್ಟೆಲ್ಲ ಅನುಭವದಿಂದ ನಿಮ್ಮನ್ನು ಮತ್ಸ್ಯ ಮಗ್ನರನ್ನಾಗಿಮಾಡಲು ಹೊರಟಿದ್ದೇನೆ.

ನಿಮಗೆ ಮೀನಿನ ರುಚಿ ತಿಳಿಯಬೇಕಾದರೆ—ಮೀನನ್ನು ತಿನ್ನಬೇಕು. ಮೀನನ್ನು ತಿನ್ನಬೇಕಾದರೆ—ಮೀನು ಸಿಗಬೇಕು. ಮೀನು ಸಿಗಬೇಕಾದರೆ—ಮೀನು ಹಿಡಿಯಬೇಕು. ಆದ್ದರಿಂದ ಮೀನನ್ನು ಹಿಡಿಯುವ ವಿಷಯವಾಗಿ ಸೂಕ್ಷ್ಮ ವಾಗಿ ಕೆಲವು ಸಲಹೆಗಳನ್ನು ನೀಡುತ್ತೇನೆ. ಸಾಧಾರಣವಾಗಿ ಮೀನು ನೀರಿನಲ್ಲೇ ವಾಸಮಾಡುತ್ತದೆ. ಒಂದು ವೇಳೆ ಮೀನಿನ ಆಕಾರವಿದ್ದು—ಭೂಮಿಯ ಮೇಲಿದ್ದರೆ ಅದು ಪ್ರಾಯಶಃ ಮೀನಲ್ಲ. ಚುನಾವಣೆಯ ಕಾಲದಲ್ಲಿ ಮತದಾರರು ಮೀನಿನ ಆಕಾರವನ್ನೇ ತಾಳುವುದುಂಟು.

ಇನ್ನು ಮೀನು ಹಿಡಿಯುವ ವಿಧಾನಗಳನ್ನು ನೋಡುವ—

1. ನೀರಿನಲ್ಲಿ ಮೀನನ್ನು ಗುರ್ತಿಸಿದ ಮೇಲೆ—(ಕೆಲವು ವೇಳೆ ಮನುಷ್ಯರು ಈಜುತ್ತಿರಬಹುದು. ಅವರನ್ನು ಮೀನುಗಳೆಂದು—ಬಾಯಿ ಚಪ್ಪರಿಸಬಾರದು)—ಮೀನನ್ನು ಹಿಡಿಯಲು ಒಳ್ಳೆಯ "ಗಾಳ"ವನ್ನು ಉಪಯೋಗಿಸಬೇಕು. ಗಾಳಕ್ಕೆ ಮೀನು ಸಿಕ್ಕಿಹಾಕಿಕೊಂಡರೆ—ನೀವು ಬಲಿಷ್ಠರಾದರೆ ಮೀನು ಹೊರಕ್ಕೆ ಬರುತ್ತೆ. ನಿಮಗಿಂತಲೂ ಮೀನು ಬಲಿಷ್ಟವಾದರೆ ನೀವು ನೀರಿಗೆ ಬೀಳುತ್ತೀರಿ. ಅದಕ್ಕೆ ತಕ್ಕ ಪ್ರಾಯಶ್ಚಿತ್ತ—ನೀವು ಈಜು ಕಲಿಯಬೇಕು.

2. ಮೀನು ಹಿಡಿಯಲು ಮತ್ತೊಂದು ಪ್ರಯೋಗವೆಂದರೆ—ಮದ್ದಿನ ಮಸಿ ನೀರಿನಲ್ಲಿ ಎರಚುವುದು. ಮಸಿ ಎರಚಿದ ನೀರಿನಲ್ಲಿ ಎಂದಿಗೂ ಈಜಬೇಡಿ. ಹಾಗೆ ಮಾಡಿದಲ್ಲಿ ನೀವು ಮೀನಿಗೆ ಆಹಾರವಾಗೀರಿ!

3. ಬಹಳ ಹೆಚ್ಚಿನ ಪ್ರಮಾಣದಲ್ಲಿ ಮೀನು ಹಿಡಿಯಬೇಕಾದರೆ—"ಬಲೆ" ಯನ್ನು ಉಪಯೋಗಿಸಬೇಕು. ಒಂದು ಬಲೆಯನ್ನು ಕೊಂಡರೆ—ವಾಲೀಬಾಲ್, ಬ್ಯಾಟ್‌ಮಿಂಟನ್ ಮುಂತಾದ ಕ್ರೀಡೆಗಳಿಗೂ ಅದನ್ನು ಸರಿಪಡಿಸಿಕೊಳ್ಳಬಹುದು.

4. ಕೆಲವು ನದಿಗಳಲ್ಲಿ ಏನೂ ಸಲಕರಣೆಗಳಿಲ್ಲದೆ—ಕಡಲೆಪುರಿ ಎರಚಿದರೆ ಮೀನುಗಳು ತಾವಾಗಿಯೇ ಓಡಿಬರುತ್ತವೆ. ನೋಡುಕ್ಕೆ ಬಲು ಚೆನ್ನು. ಹಿಡಿಯುಕ್ಕೆ ಬಲು ಕಷ್ಟ. ಕಾಲು ಜಾರಿ ನದಿಯೊಳಕ್ಕೆ ಬಿದ್ದರೂ ಬಿದ್ದೀರಿ! (ಉದಾಹರಣೆ— ಶೃಂಗೇರಿಯ ತುಂಗಾನದಿಯಲ್ಲಿ.)

5. ಕೆಲವು ಪಟ್ಟಣಗಳಲ್ಲಿ ಪಾರ್ಕ್, ತೋಟಗಳು, ಬೃಂದಾವನಗಳು— ಇವುಗಳಲ್ಲಿ ಸಣ್ಣ ಹೊಂಡಗಳಲ್ಲಿ ಮೀನುಗಳನ್ನಿಟ್ಟಿರುತ್ತಾರೆ. ಸಮಯ ನೋಡಿ ಅಪಹರಿಸಬೇಕು.

6. ಕರಿವಾಡ! ಕರಿವಾಡ!! (ತೂಕ ಮಾಡಿಸುವಾಗ ಎಚ್ಚರಿಕೆಯಿಂದಿರಿ).

ಇನ್ನೂ ಕೆಲವು ತೊಡಕಿನ ಪ್ರಯೋಗಗಳಿವೆ. ಮುಂದೆ ಸಮಯ ಬಂದಾಗ ತಿಳಿಸಲಾಗುತ್ತೆ. ಇವೇ ಅಲ್ಲದೆ ಸಮುದ್ರ, ಸಾಗರಗಳಲ್ಲಿ ದೊಡ್ಡ ದೊಡ್ಡ ಮೀನು ಗಳನ್ನು ಹಿಡಿಯುವ ವಿಧಾನಗಳೂ ಇವೆ. ಆದರೂ ನನ್ನ ಅಭಿಪ್ರಾಯದಲ್ಲಿ— ಮೇಲೆ ಹೇಳಿರುವ ವಿಧಾನಗಳಲ್ಲೆಲ್ಲಾ ಕೊನೆಯ ವಿಧಾನವೇ ಎಲ್ಲಕ್ಕಿಂತಲೂ ಉತ್ತಮ—ಕ್ಷೇಮ. ಇಂದೇ ನೀವು ಶುರು ಹಚ್ಚಿಕೊಂಡಲ್ಲಿ—ಎಷ್ಟೋ ಜನ ಬಂಧು ಮಿತ್ರರಿಂದ ವಿಮೋಚನೆ ಹೊಂದುತ್ತೀರಿ.

— "ಕೇಫ"

ಹಾದಿಯಲ್ಲಿ ಕೇಳಿಸಿದುದು—

"ಈ ವಿದ್ಯಾ ಸುಧಾರಣೆ ಪೂರ್ತಿ ಆಗೋತನಕ, ಭೂಪಠಗಳು ಒಂದು ಸ್ಥಿಮಿತಕ್ಕೆ ಬರೋತನಕ, ನವನಾಣ್ಯ ಪದ್ಧತಿ ಪ್ರಕಾರ ಹೊಸ ಲೆಕ್ಕದ ಪುಸ್ತಕಗಳು ಬರೋತನಕ ನಮ್ಮ ಹುಡುಗರನ್ನ ಸ್ಕೂಲಿಗೆ ಹಾಕೋದಿಲ್ರೀ!"

ವೈದ್ಯರಲ್ಲಿ ವಿಷನಿಮಿಷಗಳು—

ಡಾಕ್ಟ್ರೇ—ನೀವು ಹೇಳಿದಿರಲ್ಲಾ ಈ ಹುಡುಗನಿಗೆ ಶ್ವಾಸಕೋಶದಲ್ಲಿ ಬಲಾ ಇಲ್ಲಾ—ಏನಾದರೂ ವ್ಯಾಯಾಮ ಮಾಡಿಸಿ ಅಂತಾ—ಈಗ ಎರಡು ವಾರದಿಂದ ನಮ್ಮ ದೇವಸ್ಥಾನದಲ್ಲಿ ಶಂಖಾ ಊದೋಕೆ ಹಾಕಿದ್ದೇನೆ ಅವನ್ನ ಈಗ ಹೇಗಿದ್ದಾನೆ—ನೋಡಿ ಡಾಕ್ಟ್ರೇ!"

ಕವಿ ಕೊರವ

ನನ್ನನ್ನ ಬೊಂಬಾಯಿಗೆ ಬದಲೀ ಮಾಡಿದಾರೋ ಕೊರವಾ....ಎಂದಾಗ ಅವನ ಮುಖದಲ್ಲಿ ಗಾಭರಿ ಆಗಲೀ ಸಂತಾಪ ಸೂಚನೆಯ ಅನುತಾಪದ ಚಿನ್ಹೆಯಾಗಲೀ ಕಾಣಬರಲಿಲ್ಲ. ಮೂಗಿನ ಹೊಳ್ಳೆಗಳು ಅಗಲಿಸಲಿಲ್ಲ, ಕಣ್ಣು ಹುಬ್ಬು ಏಳಲಿಲ್ಲ....ಬದಲು, ಪ್ರಸನ್ನವದನನಾದ, ಸಂತುಷ್ಟನ ತೇಜಸ್ಸನ್ನ ಒಮ್ಮೆಗೇ ಮರುಕಳಿಸಿದ; ಮರಣಾನಂದದ ಮುಗುಳ್ನಗೇ ಉಮ್ಮಳಿಸಿದಾ....ಇದ್ದಕ್ಕಿದಂತೆ ಸುಮ್ಮನಾಗಿಬಿಟ್ಟ. ಮುಕ್ಕಾಲು ಗಂಟೇ ಮುಗಿದ ಮೇಲೆ, ಗಂಡಸತ್ತ ಹೆಂಗಸು ದಿವಸವಾರಗಳಾದ ಮಾರನೇ ದಿನ ಸತ್ತ ಗಂಡನ ವಿಮೆ ಪಾಲಿಸೀ ವಿಚಾರದ ಮಾತು ಪ್ರಾರಂಭಿಸುವ ರೀತಿ "ಬಾ, ಇಲ್ಲಿ ಕೂತುಕೋ" ಅಂತ ಸನ್ನೆ ಮಾಡಿದ...."ಶುಕ್ರ ಮಹರ್ದೆಸೇ ನಿನಗೆ ಈಗ ಷುರುವಾಯ್ತು ಅಂತ ತಿಳಿಕೋ"....ಎಂದ. "ಏನೋ ನಿನ್ನ ಸಾವು....ಇದು, ಸರಿಯಾಗಿ ಹೇಳ್ಬಾರದೇನೋ" ಎಂದರೆ ಮಾಣೀನ್ನ ಕರೆದು ಕ್ಲಬ್ಬಿನ ರಿಫ್ರಿಜ್ ರೇಟರ್ ನೀರು ತರಸಿ, ಆ ಛಳಿಯಲ್ಲಿ ಗಟಗಟ ಕುಡಿದ....ಕೆಮ್ಮಿದ ಕ್ಯಾಕರಿಸಿದ....ಇದ್ದಕ್ಕಿದಂತೇ....'ಹೋ' ಅಂತ ರಾಗ ಎಳೆದ....ಶ್ಲೋಕ ಕೊರವ ಸ್ವಂತ ಕಟ್ಟಿದ್ದಂತೆ....

ಕಡುನೆಂಟರು ವಕ್ಕರಿಸೀ ಕೂಳು ಕತ್ತರಿಸುವರೆಂಬ
ಭಯವಿಲ್ಲದ ನಿರ್ಭಯದಗಳ್ಳಿಗೇ ...
ಕಂಠ ಪತ್ರಕೆ ಉಲಹು ಕೂಡಿಸುವನ (ಕ್ಲಾರ್ಕ್) ಕೆಲಸವಾದರೂ
ಬೊಂಬಾಯಲ್ಲಿ ಕೆಲಸವೆಂಬುದೊಂದಗ್ಗಳಿಕೇ
ಮನೆಸಿಗದು ಅದುವೇ ನೀ ಓ ಮಡದೀ ಮಾಗಡೀಲೇ
ಮಕ್ಕಳೊಂದಿಗಿರೆಂದೊಡನೇ ಮೂದಲಿಸಲು
ಮಾರ್ಗವಿಲ್ಲದಿರುವೊಂದಗ್ಗಳಿಕೇ....

....ನಿನಗೇನೋ, ಇನ್ನು ಮರ್ರು, ಹೋಗೋ, ಸೀದ ನಮ್ಮ ಸಂಘಕ್ಕೆ ಹೋಗಿ ಅಲ್ಲಿ ನಾ ಅಸ್ವಾಮಿನವ ಅಂತಾ ಹೇಳು ತಕ್ಷಣ ಠಿಕಾಣೆ ಕೊಡ್ತಾರೆ....ಮೈಸೂರಿನವಾಂತನ್ನ ಬೇಡ ಕಂಡ್ಯಾ....ನನಗೊಂದು ದೊಡ್ಡದು ಥರ್ಮಾಸ್ ಬೇಕು....ಯಾರ ಕೈಲಾದ್ರು ಕಳುಹಿಸು...............

—ಶಶಿ.

ಉಡುಪಯ್ಯನೊಡನೆ ಭೇಟಿ

(ಕರ್ಣಾಟಕ ರಾಜ್ಯೋದಯದಂದು)

ಕರ್ಣಾಟಕ ರಾಜ್ಯೋದಯದ ಶುಭ ಸಂದರ್ಭದಲ್ಲಿ ಉಗ್ರ ಕರ್ಣಾಟಕವಾದಿಯಾದ ನಮ್ಮ ಉಡುಪಯ್ಯನನ್ನು ಭೇಟಿಮಾಡಬೇಕೆಂದು ಸಂಕಲ್ಪವಿತ್ತು. ಆದರೆ ಆ ದಿನ ನಾನು ಊರಲ್ಲಿಲ್ಲವಾದ್ದರಿಂದ ನಮ್ಮ ಸೀನೀಗೆ ಆ ಕೆಲಸ ಒಪ್ಪಿಸಿದ್ದೆ. ಸೀನಿ ಹೇಳಿಕೇಳಿ ಪತ್ರಿಕೋದ್ಯೋಗಿ. ಉಡುಪಯ್ಯನನ್ನು ಭೇಟಿಮಾಡಿ ಆತ ಮಾಡಿದ ವರದಿಯನ್ನು ಕೆಳಗೆ ಕೊಟ್ಟಿದೆ—

ಕೊಂಚ ಹೊತ್ತು ಮೀರಿ ಹೋದರೆ, ಉಡುಪಯ್ಯ ಮನೆಯಿಂದ ಹೊರಬಿದ್ದು ಯಾವುದಾದರೂ ಸಭೆ, ಉತ್ಸವಗಳ ಕಾರ್ಯಕ್ರಮದಲ್ಲಿ ಸೇರಿಕೊಂಡು ಭೇಟಿ ಫಲಕಾರಿಯಾಗದೆಂದು, ಕಾಫಿಮಾತ್ರ ಬಸಿದುಕೊಂಡು ಹೊರಟೆ. ನಾನು ಹೋಗುವಾಗ ಕರ್ಣಾಟಕ ಶಾರ್ದೂಲ ಉಡುಪಯ್ಯನವರು ಅವಸರವಸರವಾಗಿ ಇಡ್ಲಿ ಮುರಿದು ಬೆಣ್ಣೆ ಚಟ್ಣಿಗಳಿಗೆ ಮುಟ್ಟಿಸುವ ದೃಶ್ಯ ವರಾಂಡದಲ್ಲಿಯೇ ಕಣ್ಣಿಗೆ ಬಿತ್ತು. "ಬಾರಯ್ಯ ಬಾರಯ್ಯ" ಎಂದು ಕೂಗಿದರು. ಒಳಕ್ಕೆ ನಡೆದೆ. ನೋಡುತ್ತೇನೆ, ಶಾರ್ದೂಲರ ಕಣ್ಣಲ್ಲಿ ನೀರು ಸುರಿಯುತ್ತಾ ಇದೆ! ದೀಪಾವಳಿಯ ಅಭಿವಾದನೆ ಮಾಡಿದೆ. ಗಂಭೀರವಾದ ಒಂದು ಆಶೀರ್ವಾದ ಇಡ್ಲಿ-ಚಟ್ಣಿ-ಬೆಣ್ಣೆಗಳ ಸಮ್ಮಿಲನದ ನಡುವೆ ತೋರಿಬಂತು. ಧನ್ಯನಾದೆ ಅಷ್ಟರಲ್ಲಿ ನನ್ನ ಮುಂದೆಯೂ ಇಡ್ಲಿ ತಟ್ಟೆ ಬಂದು ಕೂತಿತು. ಕಾರ್ಯ ಪ್ರವೃತ್ತನಾಗುವ ಮೊದಲು "ಇದೇನು ಕಣ್ಣೀರು ಪ್ರಭೋ? ಆನಂದಾಶ್ರುವೆ?" ಎಂದು ಉಡುಪಯ್ಯನವರನ್ನು ಪ್ರಶ್ನಿಸಿದೆ.

ಅವರಿಗೆ ಗಂಟಲು ಕಟ್ಟಿಬಂತು. ಕಾಫಿ ಸುರಿದು ಸುಧಾರಿಸಿಕೊಂಡು "ಕಣ್ಣೀರೇ? ಹಾಯ್, ಕಣ್ಣೀರೆ? ಯಾಕಂತ ತಿಳಿಯೋದಿಲ್ಲವೆ? ಕಾಸರಗೋಡು ಕೈಬಿಟ್ಟಿತಲ್ಲಾ ಮರಿ! ನಮ್ಮ ಜಿಲ್ಲೆಯ ಅಲ್ಲ, ನನ್ನ ಜಿಲ್ಲೆಯ ಗೋಣು ಮುರಿದರಲ್ಲ ಸೀನಿ! ಕಣ್ಣೀರು ಬಾರದಿರುತ್ತದೆಯೆ? ಹೇಗೆ ಸಹಿಸೋದು ಇದನ್ನ!"—ಎಂದು ದೋತ್ರವನ್ನು ಕೊಂಚ ಸಡಿಲಿಸಿದರು. "ಅವನು ತಿನ್ನುತಾ ಇರೋವಾಗ ನಾನು ಸುಮ್ಮನೆ ಇರೋದೆ? ತಾ ನನಗೂ ಇನ್ನೆರಡು"—ಎಂದು ಆಣತಿಯನ್ನಿತ್ತರು.

ನಾನೆಂದೆ—"ಉಡುಪಯ್ಯ, ಎಣಿಸಿದರೆ ಯಾರಿಗಾದರೂ ಕಣ್ಣೀರು ಬರುವ ವಿಚಾರವೇ ಅದು. ಹೀಗೆ ಇಡ್ಲಿ ದೋಸೆಗಳನ್ನು ಮುರಿಯುತ್ತ ಉಪ್ಪಿಟ್ಟು, ಚಪಾತಿ

ಉಸಲಿ ಮೊದಲಾದುವುಗಳನ್ನು ಮೆಲ್ಲುತ್ತಾ ಎಷ್ಟು ಮಂದಿ ಕನ್ನಡಿಗರು ಈ ದಿನ "ಕಾಸರಗೋಡು ಕೈಬಿಟ್ಟಿತೆ!" ಎಂದು ರೋದಿಸುತ್ತಿದ್ದಾರೋ ಪೇಳಲಸದಳವಲ್ಲ. "ಈ ದುಗುಡಕ್ಕೆ ಯಾವ ಪರಿಹಾರವೂ ಇಲ್ಲವೆ?"—ನನಗೂ ಕಣ್ಣೀರು ಬಂತು ಚಟ್ನಿ ಬಲು ಖಾರ, ಉಡುಪಯ್ಯನದು. ಕಾಫಿ ಲೋಟ ಕೈಗೆತ್ತಿಕೊಂಡೆ.

"ಮುಖ್ಯ ನೋಡಯ್ಯ ನಮ್ಮ ಜನಗಳಿಗೆ ಮೊದಲಿಂದಲೂ ಕನ್ನಡದ ಮೇಲೆ ಅಭಿಮಾನವಿಲ್ಲ. ಕನ್ನಡದ ಸಮಸ್ಯೆ ಇಡ್ಲಿ ದೋಸೆಗಳಿಗಿಂತ ಪ್ರಾಮುಖ್ಯವಲ್ಲ ಅವರಿಗೆ. ಉದಾಹರಣೆಗೆ ನೀನೇ ಆಡಿದ್ದು ಕಂಡೆನಲ್ಲ. ಕಾಸರಗೋಡಿಗೆ ಎಲ್ಲಿ ಸಂಚಕಾರ ಬರುತ್ತೋ ಅಂತ ನಮ್ಮ ಕಡೆ ಜನ ಎಚ್ಚರಗೊಂಡದ್ದು ಮೊನ್ನೆ ಮೊನ್ನೆ. ಅದೇ ಬೆಳಗಾಮಿನವರು ನೋಡು 20–30 ವರ್ಷ ಸಾಧನೆ ನಡೆಸಿ ಮುಖ ಉಳಿಸಿ ಕೊಂಡರು. ನಮ್ಮ ಕಡೆ ಗಣ್ಯರೆನಿಸಿಕೊಂಡ ಮಂದಿಗೆ ಯಾವ ರಾಜ್ಯವಾದರೇನು ಎಂಬ ದೊಡ್ಡ ಮನಸ್ಸೇ ಮೊದಲಿಂದಲೂ. ಇಡೀ ಜಿಲ್ಲೆ ಕೇರಳಕ್ಕೆ ಸೇರಿದ್ದರೂ ತಲೆ ಬಿಸಿ ಮಾಡಿಕೊಳ್ಳುವುದಿಲ್ಲ. ವಿಶಾಲ ಹೃದಯಿಗಳು ನಮ್ಮಲ್ಲಿದ್ದಾರೆ. ಕೇಳಪ್ಪ, ಗೋಕರ್ಣದ ತನಕ ಕಾಲು ಚಾಚುತ್ತೇನೆಂದ. ನಾಲ್ಕು ಜನ ಪೇಪರಿನೋರು, ಬುಕ್ಕು ಬರೆಯೋರು, 'ಹೋ' ಎಂದರು. ಮಹನೀಯರೆಲ್ಲ 'ಛಿ ಛಿ' ಎಂದರು. ನಮ್ಮಲ್ಲಿ ಹೆಚ್ಚಿನ ಮಂದಿ ವೈದ್ಯ, ವಕೀಲ, ಬ್ಯಾಂಕು, ಬಸ್ಸು, ಇನ್ಸ್ಯೂರೆನ್ಸಿನ ಜನ ಗಳೆಲ್ಲ 'ಮಲಯಾಳವಾದರೇನು, ಕನ್ನಡವಾದರೇನು, ದುಡ್ಡು ದುಡ್ಡೇ! ರೋಸು ಯಾವಾಗಲೂ ರೋಸೋ!'--ಅಂತಂದುಕೊಂಡಿರುವ ಸ್ವಭಾವದವರು 'ಕನ್ನಡಮ್ಮ' ಎಂಬ ಶಬ್ದ ಕಿವಿಗೆ ಬಿದ್ದರೆ 'sentimental nonsense' ಎಂದು ಗದರಿಸುವ ಮುಂದಾಳುಗಳಿದ್ದರು ನಮ್ಮಲ್ಲಿ. ಈಗ ಅವರು ಕರ್ಣಾಟಕ ಮಾತೆಗೆ ಗಂಜ ಜೈಗಳ ಮಾಲೆ ಹಾಕುತ್ತಿದ್ದಾರೆ. 'ಅಪ್ಪಚ್ಚಿ' ಹಿಡಿದು ನಿಂತರೆ ಅಮ್ಮನಿಗೆ ಯಾರು ದುಂಬಾಲು ಬೀಳುವುದಿಲ್ಲ? ಹಿಂಡಿ ಸಿಗುತ್ತೆ ಅನ್ನುವಾಗ ನಮ್ಮ ದನಗಳು ಬಾಲ ಬೀಸಿ ನಾಲಿಗೆ ಕುಣಿಸತೊಡಗಿದವು. ಕಾಸರಗೋಡು ನಮ್ಮದು ನಮ್ಮದು ಎಂದವು. ಮನೆಗೆ ಬೆಂಕಿ ಹತ್ತಿದಾಗ ಗುದ್ದಲಿ ಹುಡುಕತೊಡಗುವವರಿಗೆ ಏನು ದಕ್ಕುತ್ತೆ? ಹೆಚ್ಚು ಕಡಮೆ ನಮ್ಮ ಜಿಲ್ಲೆಯವರಿಗೆ ಅಷ್ಟೇ ದಕ್ಕಿತು—ಈಗ ನೋಡು, ಕಾಸರ ಗೋಡು ಎಲ್ಲಿದೆ?" ಎಂದು ಕಣ್ಣೊರೆಸಿಕೊಂಡರು ಉಡುಪಯ್ಯ.

"ಎಲ್ಲಿದೆ?" ಎಂದು ಮರು ಸವಾಲು ಹಾಕಿದೆ—ಬೇಕಂತಲೇ.

ಅವರು ವ್ಯಂಗವಾಗಿ—"ಎಲ್ಲಿದೆ, ಕೆನಡಾದಲ್ಲಿದೆಯೆ? ಹಂಗೇರಿಯಲ್ಲಿದೆಯೆ? ಭಾರತದಲ್ಲಿದೆ!" ಅಷ್ಟೇ ತಾನೆ ನಿನ್ನ ವಾದ?" ಥೂ ಮನೆ ಮುರುಕರೆ! ಕರ್ಣಾಟಕದ್ದು, ಕರ್ಣಾಟಕದಲ್ಲಿರಬೇಕಾದ್ದು, ಕರ್ಣಾಟಕದಲ್ಲಿದೆಯೋ ಅಂತ ನೋಡಿ ಮಾತಾಡಿ!" ಎಂದು ರೇಗಿದರು. ಮರುಕ್ಷಣ "ಹಬ್ಬದ ದಿನ ಬೈದುಬಿಟ್ಟೆನಲ್ಲೋ!

ಪರಿಹಾರ ಇದೇ ! "ಲೇ ಇವನಿಗೆರಡು ಇಡ್ಲಿ ತಾರೇ....ಹೂಂ ನನಗೂ ಒಂದಿರಲಿ"— ಎಂಬ ಪರಿಹಾರವೂ ಆಯಿತು.

"ಉಡುಪಯ್ಯ, ಚೆಲುವ ಕನ್ನಡನಾಡು ಉದಯವಾಗುತ್ತಿರುವಾಗ ಇದ್ದಿದ್ದ ರಲ್ಲಿ ಸಂತೋಷಪಡೋದು ಬಿಟ್ಟು ಸುಮ್ಮನೆ ರೇಗ್ತೀರಲ್ಲ. ಸಾಲದ್ದಕ್ಕೆ ಖಾರದ ಚಟ್ನಿ ಮಾಡಿಸಿ ಕಣ್ಣೀರು ಬೇರೆ ಹಾಕ್ತಿದೀರಿ. ಹೋಗಲಿ ಬಿಡಿ; ಇನ್ನಾದರೂ ಸಂತೋಷವಾಗಿರಿ....ಅಂ....ಅಂದಹಾಗೆ ನವರಾಜ್ಯಕ್ಕೆ ನಿಮ್ಮ ಸಂದೇಶವೇನು ಅಂತ ಹೇಳಿ"—ಎಂದು ಪುಂಗಿ ಬಾರಿಸಿದೆ.

"ಹೋಗು ಬೀದೀಲಿ ಮೇಯ್ತಾ ಇದೆಯಲ್ಲ, ಆ ಬಸವನ್ನ ಕೇಳು. ನಿನ್ನ ಮನಸ್ಸಿಗೆ ಬೇಕಾದ ಹಾಗಿನ ಸಂದೇಶಕೊಡುತ್ತದೆ. 'ಹೌದಾ' ಅಂದರೆ ಹೌದು ಅನ್ನುತ್ತದೆ. 'ಅಲ್ಲ' ಅನ್ನು ಅದೂ 'ಅಲ್ಲ' ಅನ್ನುತ್ತದೆ. ನೀವು ಪೇಪರಿನೋರು ಸಂಗ್ರಹಿಸೋದು ಅಂಥಾದ್ದೇ ಸಂದೇಶಗಳು"—ಎಂದು ಬಾಣಬಿಟ್ಟರು ಉಡುಪಯ್ಯ.

"ಸರಿ ಬಿಡಿ. ಕರ್ಣಾಟಕಕ್ಕೆ ಒಂದು ನವೀನ Emblem—ಲಾಂಛನ— ಅದನ್ನಾದರೂ ಸೂಚಿಸುತ್ತೀರಾ ?"

"ಅದಕ್ಕೇನಂತೆ, ಧಾರಾಳವಾಗಿ ಲಾಂಛನದಲ್ಲಿ ಐದು ಪ್ರದೇಶಗಳನ್ನು ಪ್ರತಿ ನಿಧೀಕರಿಸಲು ಐದು ಗುರುತುಗಳಿರಲಿ" ಅಂತ ಪ್ರಾರಂಭಿಸಿದರು. ನಾನು ಕಿವಿ ನಿಮಿರಿಸಿ ಕೇಳಿದೆ. "ನಮ್ಮ ಜಿಲ್ಲೆಯ ಪರವಾಗಿ ಯಾವ ಗುರುತು ಗೊತ್ತೇ ?"

"ಹೇಳಿ, ಹೇಳಿ ; ಕಡಲೇ ? ತೆಂಗಿನ ಮರವೆ ? ಸೌಟು ಸಟ್ಟುಗವೇ ? ಇನ್ನಾವು ದಾದರೂ...."

"ಥೂ....ಅದೆಲ್ಲಾ ಆಗದು ; ಸುಣ್ಣದ ಬೊಟ್ಟು ನಮ್ಮ ವೈಶಿಷ್ಟ."

ನನಗರ್ಥವಾಗಲಿಲ್ಲ. "ಸುಣ್ಣದ ಬೊಟ್ಟು ?" ಎಂದು ಹುಬ್ಬೇರಿಸಿದೆ.

"ಹೌದು ಕಣಯ್ಯ ಬೆಪ್ಪೆ ! ಸುಣ್ಣದ ಬೊಟ್ಟೆಂದರೆ ಸುಣ್ಣದ ಬೊಟ್ಟು ! ವೀಳ್ಯ ತಿಂದು ನಮ್ಮ ಜನಗಳು ಮಿಕ್ಕ ಸುಣ್ಣವನ್ನು ಹಚ್ಚದಿರುವ ನಾಲ್ಕು ಚದರಗಜ ಸ್ಥಳ ನಮ್ಮ ಜಿಲ್ಲೆಯಲ್ಲಿ ಸಿಗಲಾರದು. ನಮ್ಮೂರಿನ ಬಸ್ಸಿನಲ್ಲಿ "ಹೊಗೆಬತ್ತಿ ಸೇದಬೇಡಿ" ಇತ್ಯಾದಿ ಉಪದೇಶಗಳೊಡನೆ "ಸುಣ್ಣ ಹಚ್ಚಬೇಡಿ" ಎಂಬ ಉಪದೇಶವನ್ನೂ ಬರೆ ದಿರುತ್ತಾರೆ. ಆದರೆ ಅದರ ಕೆಳಗಡೆಯೇ ಎರಡು ಬೊಟ್ಟುಗಳು ರಾರಾಜಿಸುತ್ತಾ ಆ ಬೋರ್ಡನ್ನು ಅಣಕಿಸುತ್ತಿರುತ್ತವೆ. ಅಂತೂ ಸುಣ್ಣದ ಬೊಟ್ಟು ನಮ್ಮಲ್ಲಿ ಸರ್ವಾಂತರ್ಯಾಮಿ. ಅದೇ ನಮಗೆ ಲಾಂಛನ. ಇನ್ನು ನಮ್ಮ ಮೈಸೂರಿಗೆ ಯಾವುದೆಂದು ನೀನೇ ಯೋಚಿಸು.

"ಯೋಚಿಸಬೇಕಾದ್ದೇ ಇಲ್ಲ. ನಿಮಗೆ ಸುಣ್ಣದ ಬೊಟ್ಟಾದರೆ, ನಮಗೆ ಕಡಲೆಕಾಯಿ ಸಿಪ್ಪೆಯೇ ಸರಿ"—ಎಂದೆ.

ಅಷ್ಟರಲ್ಲಿ ಪತ್ರಿಕೆಗಳ ಹೊರೆ ಬಂತು. ಉಡುಪಯ್ಯನವರ ಕುತೂಹಲ ತೀವ್ರವಾಯಿತು. "ಈ ಕಡಲೆಕಾಯಿ ಸಿಪ್ಪೆಯಂಥ ಮಾತಿನಲ್ಲಿ ಕಾಲ ಕಳೆದದ್ದರಿಂದಲೇ ನಮ್ಮ ಯೊಗ್ಯತೆ ಇಷ್ಟಕ್ಕೆ ನಿಂತಿದ್ದು" ಎಂದು ವೃಥಾ ನನ್ನನ್ನು ಜರೆದರು.

ಆ ಮೇಲೆ ಒಂದೇ ಸವನೆ ಕರ್ಣಾಟಕದ ಸಂಪತ್ತನ್ನು ಹೇಗೆ ಸಂವರ್ಧಿಸಬಹುದೆಂಬುದರ ಕುರಿತು ದೀರ್ಘವಾದ ಒಂದು ಉಪನ್ಯಾಸಕೊಟ್ಟರು. ಎಲ್ಲ ಪತ್ರಿಕೆಗಳವರೂ, ಎಲ್ಲ ಮುಂದಾಳುಗಳೂ ಹೇಳುತ್ತಾ ಬಂದಿದ್ದೇ ಸಮಾಚಾರ ಅದು. ನಮ್ಮ ಹೊಳೆ, ನಮ್ಮ ಬೆಟ್ಟ, ನಮ್ಮ ಅರಣ್ಯ ಸಂಪತ್ತು, ನಮ್ಮ ಖನಿಜ ಸಂಪತ್ತು, ವಿದ್ಯುತ್ತಿನ ಉತ್ಪಾದನೆ ಇತ್ಯಾದಿ ಇತ್ಯಾದಿ. "ಹೌದು, ಹೌದು, **ಯಾರಾದರೂ** ಅವುಗಳನ್ನು ಸರಿಯಾಗಿ ಬಳಸಲು ಸಾಧನೆಮಾಡಿದರೆ ಕರ್ಣಾಟಕ ಸಂಪತ್ಸಮೃದ್ಧವಾಗುತ್ತದೆ."—ಎಂದೆ.

"ಅಲ್ವೆ ಮತ್ತೆ! **ಯಾರಾದರೂ** ಶ್ರಮಿಸಬೇಕು! ನಮ್ಮದು ಆ ಗುರಿಯ ದರ್ಶನ ಮಾಡುವ ಕಾರ್ಯ ಮಾತ್ರ"—ಎಂದಿತು ಮಹಾ ಸಿನಿಕ ಆಸಾಮಿ! ಸಭೆಯೊಂದರಲ್ಲಿ ನಾಲಗೆ ಝುಳಪಿಸಲು ಟೋಪಿ ಏರಿಸಿ ಸಿದ್ಧವಾಯಿತು. ಕರ್ಣಾಟಕ ಶಾರ್ದೂಲರಿಗೆ ನಮಸ್ತೇ ಮಾಡಿ ಹೊರಬಿದ್ದೆ.

ಉಡುಪಯ್ಯನವರ ಭೇಟಿಯಿಂದ ಸೀನಿ ತನ್ನ ನವರಾಜ್ಯ ನಿರ್ಮಾಣ ದಿನಾಚರಣೆಯನ್ನು ಪ್ರಾರಂಭಿಸಿದ್ದು ಚೆನ್ನಾಯಿತು. ಆ ದಿನವೆಲ್ಲ ಅವನ ಬುರುಡೆಯೊಳಗೆ ಕನ್ನಡಕುವರರ ಭಾಷಣಗಳ ಪ್ರವಾಹವಾದರೆ, ಗಂಟಲೊಳಗೆ (ಉಡುಪಯ್ಯನ ಚಟ್ನಿಯ ಪ್ರಭಾವದಿಂದಾಗಿ) ಪಾನೀಯಗಳ ಪ್ರವಾಹ ಮಾತ್ರವೇ ಹರಿಯುವಂತಾಯಿತು.

—ಶಾಮಿ.

ಹಿಂದೆ ಕೇಳಿದ್ದರೆ—ಕ್ಷಮಿಸಿ

"ಅನ್ಯಾಯವೊಂದ್ರೆ! ಆಚೆ ಮೊನ್ನೆ ರಾತ್ರಿ—ಮೊನ್ನೆ ಬೆಳಿಗ್ಯೆ ಮನೆಗೆ ಬಂದ್ರಿ. ಮೊನ್ನೆ ರಾತ್ರಿ—ನೆನ್ನೆ ಬೆಳಿಗ್ಯೆ ಬಂದ್ರಿ. ನೆನ್ನೆ ರಾತ್ರಿ— ಈಗತಾನೆ ಮನೆಗೆ ಬರ್ತಾ ಇದ್ದೀರಿ. ಇನ್ನು ಇವತ್ತು ರಾತ್ರಿ ಕೂಡ—ನೀವು ನಾಳೆ ಮನೆಗೆ ಬಂದ್ರೆ— ನಾನು ನಮ್ಮ ತಾಯಿ ಮನೆಗೆ ಹೋಗ್ತೀನೆ."

"ನಿಜ್ವೇ!"

ನನ್ನ ವೈಶಿಷ್ಟ್ಯ

ಈಡನಾ ಪಿತೂರಿಯಿಂದಲಿ ಜ್ವರದಿ ಲಿಬಿಲಿಬಿ ತಪಿಸಲಿ
ಬೀಡಿ ಸೇದುವ ಜನರ ಕರುಳಲಿ ಹುಣ್ಣು ಜನಿಸಲಿ, ಜಪಿಸಲಿ,
ಚೀಣಪೀಠದಿ ಚ್ಯಂಗ್‌ಕೆ ಷೇಕನು ಯೂನೊ ಸಭೆಯಲಿ ಕೂರಲಿ
ಮೀನ ಮೇಷವ ನೆಣಿಸುವ ವೈಕನು ಬಿಳಿಯ ಭವನಕೆ ತೂರಲಿ

ನನಗೆ ಹುಚ್ಚೇ ಹಿಡಿಯದು,
ನಾನು ಬೆಚ್ಚಗೆ ಮಲಗುವೆ,
ನಾನು ನಿದ್ದೆಯ ಮಾಡುವೆ.

ಇವರು ಅವರನು ಅವರು ಬೆವನನು ಬೈದು ಗಂಟಲು ಒಣಗಲಿ
ಪವರು ಆವಗಿಂತೆನಗೆ ಹೆಚ್ಚೆಂದಿವರು ಬಾಂಬನು ಸಿಡಿಸಲಿ
ಹಣವನುಳಿಸಲು ಸೌಧಗೋಪುರವದನೆ ಪತ್ತಡಿ ಇಳಿಸಲಿ
ಬಣಗಳೆರಡಿಗು ಕಾಫಿ ಟೀಗಳ ನಮ್ಮ ದೇಶವು ಕಳಿಸಲಿ

ನನಗೆ ಹುಚ್ಚೇ ಹಿಡಿಯದು
ನಾನು ಬೆಚ್ಚಗೆ ಮಲಗುವೆ
ನಾನು ನಿದ್ದೆಯ ಮಾಡುವೆ

ಹುಡುಗ ಹುಡುಗಿಯರಾಡಿ ನಲಿಯಲಿ ಹಾದಿ ಬೀದಿಲಿ ಕುಣಿಯಲಿ
ದುಡಿದು ದೇವರ ಸೇವೆಗೈಯುತ ಎನ್ ಜಿ ಓಗಳು ದಣಿಯಲಿ
ನೈಲು ದೇಶದ ಮೇಲೆ ಬಿದ್ದವ ತೈಲ ಸಾಲದೆ ಗೊಣಗಲಿ
ರೈಲು ಹೊತ್ತಿಗೆ ಬಾರದಿರಲಿ, ಅತ್ತ ಅಲ್ಲೇ ಒಣಗಲಿ

ನನಗೆ ಹುಚ್ಚೇ ಹಿಡಿಯದು
ನಾನು ಬೆಚ್ಚಗೆ ಮಲಗುವೆ
ನಾನು ನಿಮ್ಮಂತಲ್ಲರೀ

—ಪಾಟಾಳಿ.

ರಾಮು Vs. ರಾಮಚಂದ್ರ

1. ಚಿಟ್

ಎಡಗೈಲಿದ್ದ ಸಿಗರೇಟನ್ನು ತುಟಿಯ ಮಧ್ಯೆ ಸೇರಿಸಿ, ಕಾಫಿಯನ್ನು ನುಂಗಿ "ನನ್ನಿಂದ ಅದು ಸಾಧ್ಯ" ಎಂದ ರಾಮು.

"ಲೋ ನಾಳೆ ಹಜಾಮತಿ ಮಾಡಿಕೊಳ್ಳಲು ಬ್ಲೇಡಿಗೆ ಎರಡಾಣೆ ಇದೆಯೋ ಇಲ್ಲವೋ ನೋಡಿಕೋ ನಮ್ಮಂಥ ಅತಿರಥ ಮಹಾರಥರಿಂದಾಗದ ಕೆಲಸ ನಿನ್ನಂಥ ಮೂದೇವಿಗೆ....ಹೋ! ಲೋ, ಸ್ವಲ್ಪ ತಾಖತ್ ಕಿ ದವಾ ಕುಡಿಯೋ ತೆಪರೇ!" ಎಂದ ರಾಮಚಂದ್ರ.

ಸುತ್ತಲೂ ಕುಳಿತವರು ಗಹಗಹಿಸಿದರು. ರಾಮು ಗಂಭೀರವಾಗಿ ಕುಳಿತಿದ್ದ. ರಾಮಚಂದ್ರ ಮಹಾಸಮರವನ್ನು ಗೆದ್ದೆನೆಂದುಕೊಂಡ. ಮೇಜು ಕುಟ್ಟಿ ಮುಂದುವರಿಸಿದ.

"ಎಲೋ ಮಗನೇ! ಇದು ಬೆಂಗಳೂರಲ್ವೋ, ಕಲ್ಕತ್ತಾ ಮೊದಲೇ ಅಲ್ಲ. ಇದು ಮುಗಿಲುಹಳ್ಳಿ. ಹೆಸರಿಗೆ ಸಿಟಿ, ಶುದ್ಧ ಪಿಟಿಪಿಟಿ. ಎಲ್ಲರನ್ನೂ ಎಲ್ಲರೂ ಬಲ್ಲರು. ಹೆಣ್ಣು ಅಡುಗೆ ಮನೆಗೆ, ಗಂಡು ಬೀದೀಗೆ ಎಂಬ ಪುರಾತನ ನ್ಯಾಯ ಇಲ್ಲಿ ಇನ್ನೂ ಜಾರೀಲಿದೆ. ಅಂಥಾದರಲ್ಲಿ ನೀನು-ನೀನು-ನೀನು-ಸಿನಿಮಾಕೆ-ಹುಡ್ಗೀ ಜೊತ್ಗೆ ಬರ್ತೀಯಾ? ಲೋ, ನಾವೆಲ್ಲಾ ಎಷ್ಟು ದಿನದಿಂದ ಅಕಲ್ ಹಾಕಿದೀವಿ ಗೊತ್ತೋ? ಆಗಿಲ್ಲ, ಇನ್ನೂ ಆಗಿಲ್ಲ. ಮುಂದಿನ ಪ್ರೈಂಮಿನಿಸ್ಟರು ಲೋಹಿಯಾ ಆದ್ರೂ ಆಗಬಹುದು. ಯಾವ ಹುಡುಗೀನೂ ನಿನ್ನ ಜೊತೆಗೆ ಸಿನಿಮಾಕ್ಕೆ ಬರೋಲ್ಲ. ಮೊದಲ್ನೇದಾಗಿ ನಿಮ್ಮಂಥಾನೆ ನನ್ನ ಜೊತೇ ಬರ್ಬೇಡಾ ಅಂತ ಹುಡ್ಗೀಗೆ ಹೇಳ್ತಾ ಇದೆ. ಎರಡನೇದಾಗಿ ನಿನ್ಗೆ ಯಾವ ಹುಡುಗೀನೂ ಗೊತ್ತಿಲ್ಲ. ಈ ದಿನ ಗೊತ್ತಾದ್ರೂ ನಿನ್ಜೊತೇಲಿ ಸಿನಿಮಾಕ್ಕೆ ಬರೋಲ್ಲ. ಮೂರ್ನೇದಾಗಿ, ಒಂದು ಪಕ್ಷ ಅವಳು ಬಂದ್ರೂ ಅವಳ್ಜೊತೇ ಮೆರವಣಿಗೆ ಮಾಡ್ಕೊಳ್ತಾ ಬರೋ ತಾಖತ್ ನಿನಗಿಲ್ಲ. ನಾಲ್ಕನೇದಾಗಿ ಈ ಊರಿನ ಕುರಿಗಳಿಗೆ ಹುಡುಗೀರು ಸಿನಿಮಾಕ್ಕೆ ಹುಡ್ಗರ ಜೊತೇ ಬರೋದನ್ನು ನೋಡಿ ಅಭ್ಯಾಸವಿಲ್ಲದ್ದರಿಂದ, ನೀನು ಬಂದ್ರೆ ನಿನ್ಗೆ ಅವಮಾನ ಆಗೋದಲ್ದೆ ಥೇಟರ್ನಲ್ಲಿ ದೊಂಬಿ ಆದೀತು.

"ಹೀಗಾಗಿ ಅದು ಮದ್ರಾಸ್ನಲ್ಲಿ ಸಾಧ್ಯ, ಬೊಂಬಾಯ್ನಲ್ಲಿ ಸಾಧ್ಯ ಲಂಡನ್ನಲ್ಲಿ ಸಾಧ್ಯ. "will you come for a matinee show in Regal Theatre, my dear miss Harrison" ಎಂದೋ ಏನೋ ಮಿ. ಗೈಲ್ಸ್ ವರ್ತ್ ಕೇಳಿದರೆ, ಆ ಮಿಸ್ ಹ್ಯಾರಿಸನ್ "with extreme pleasure Mr. Gylesworth" ಎಂದು ಬಿಡುತ್ತಾಳೆ. ಇಲ್ಲಿ "ಹೇಮಾವತೀ ಸಿನಿಮಾಕೆ ಬರ್ತೀಯಾ?" ಎಂದರೆ ಬೀಳುತ್ತೆ ಮೂತೀಗೆ ನಾಲ್ಕೇಟು............". ಈಗ ರಾಮು ಮೇಜು ಕುಟ್ಟಿದ "ಸೈಲೆನ್ಸ್........ನಿನಗೆ ಅದು ಅಸಾಧ್ಯವಿದ್ದೀತು ನನಗಲ್ಲ" ಎಂದ.

"ಲೋ ರಾಮು, ಹಾಗೆ ನೀನು ಮಾಡಿದ್ರೆ ಹತ್ರುಪಾಯಿ ಕಣೋ ನಿಂಗೆ, ಇಲ್ದಿದ್ರೆ?"

"ನಿಂಗೆ"

"ಎಂದು ಬರುತ್ತೀ? ಮುಂದಿನ ವರ್ಷವೋ?"

"ನಾಳೆ ಮಾರ್ನಿಂಗ್ ಷೋಗೆ. ಥಿಯೇಟರ್ ಜಿಬ್ರಾಲ್ಟರಿಗೆ"

2. ಅಟೆಂಪ್ಟ್

'ರೋಮನ್ ಹಾಲಿಡೇ! ಗ್ರಿಗರಿಪೆಕ್!! ಆಡ್ರಿಹೆಬ್ಬರ್ನ್!!! ಎಂಥ ಹೆಸರಿವು? ಆದಿ ಶ್ರೀರಾಮನಿಂದ ಹಿಡಿದು ಹಾಲಿ ಸೀತಾರಾಮುವಿನವರೆಗೂ ಎಲ್ಲರ ರಕ್ತ ಕುದಿದು, ತಲೆ ಕೂದಲು ಸೆಟೆದು, ಕಣ್ಣುಗುಡ್ಡೆ ಬಿಳುಪಾಗುವಂಥಾ ಹೆಸರುಗಳು. ಆದರೆ........

ರಾಮು ಆ ಹೆಸರಿನ ಜಾಹಿರಾತು ಓದಿ ಭಯದಿಂದ ನಡುಗಿದ. ಇದ್ದ ಅವನ ಅರೆ ಎದೆಯೂ ಒಡೆದು ನೀರಾಯಿತು. ಹತ್ತು ರೂ! ಐಕ್, ಫ್ಲೋರ್ಡ್, ಬಿಲಾರ್ ಗಳಿಗೆ ಕಸವಾದ ಆ ಹಣ ಇವನಿಗೆ ಪೆಡಂಭೂತ.

ಬೆಟ್ ಗೆಲ್ಲುವ ಹಾಗೇ ಇಲ್ಲ. ಸೋಲುವುದು ನಿಜ. ಆಗ? ಹತ್ತು ರೂ.ಗಳು ಕೈ ಬಿಟ್ಟರೆ, ಅವನ ಮನ ಶೂನ್ಯ, ಮನೆ ಶೂನ್ಯ ಸಾರೀ ಜಿಂದಗಿಯೇ ಬರ್‌ಬಾದ್.

ಹುಡುಕುವುದು ಯಾರನ್ನು? ಎಲ್ಲಿದ್ದಳು ಅದೃಷ್ಟದಾಯಿನಿ? ಅವಳೊಲಿದು ಅವನೊಡನೆ ಸಿನಿಮಾಕ್ಕೆ ಬಂದಾಳೆ? ಇಲ್ಲ. ಸಾಧ್ಯವಿಲ್ಲ. ಕಷ್ಟಂ, ಕಷ್ಟಂ. ರಾಮಚಂದ್ರ ಹೇಳಿದ್ದು ನಿಜ. ಮುಗಿಲು ಹಳ್ಳಿಯಲ್ಲಿ ಗಂಡು ಹೆಣ್ಣುಗಳು (ಅವರು ಗಂಡ ಹೆಂಡಿರೇ ಆಗಿರಲಿ) ಒಟ್ಟಿಗೆ ಸಿನಿಮಾಕ್ಕೆ ಹೋಗುವುದು ಕಷ್ಟ. ಎಲ್ಲರೂ ಎಲ್ಲರಿಗೂ ಗೊತ್ತು. ಏನು ಮಾಡಿದರೂ ಅಪವಾದ ಭಯ. ಮುಗಿಲುಹಳ್ಳಿ ಲಂಡನ್ ಅಲ್ಲ–ಕಲ್ಕತ್ತಾ ಅಲ್ಲ.

ರಾಮು ಇದ್ದಕ್ಕಿದ್ದಂತೆ ಪ್ರಪಂಚದ್ವೇಷಿಯಾದ. 'ಆಹಾ ಇದೆಂತಹ ದುನಿಯಾ? ಎಂಥ ಸಮಾಜ? ಅಲ್ಲಿ ಕಟ್ಟ ನಿಟ್ಟೇಕೇ ಹೀಗೆ ಯೋಚಿಸುತ್ತಾ ಹೊರಟ ಅವನನ್ನು ಒಂದು ಧ್ವನಿ 'ಶ್ರೀರಾಮಚಂದ್ರಃ' ಎಂದು ಸಂಬೋಧಿಸಿತು. ಅವನು ಅದನ್ನು ಗಮನಿಸಲಿಲ್ಲ.

"ನಾಳೆ ಮಾರ್ನಿಂಗ್ ಷೋ ಹೊತ್ತಿಗೆ ಎಲ್ಲಿಂದ ತರಲಿ ಹುಡುಗಿಯನ್ನು? ಮದುವೆಯಾಗುವುದಾದರೆ ಹೆಣ್ಣು ಕೊಡಲು ಹತ್ತು ಜನ ಮುಂದೆ ಬಂದಾರು. ಸಿನಿಮಾಕ್ಕೆ ನಿಮ್ಮ ಮಗಳನ್ನು ನನ್ನ ಜೊತೇಲಿ ಕಳಿಸಿ ಎಂದರೆ? ಹಿತ್ತಿಲಲ್ಲಿ ಗುಂಡಿ ತೆಗೆದು ಹೂತು ಬಿಟ್ಟಾರು. ಅಯ್ಯೋ? ಅಯ್ಯೋ!" ಎಂದು ಚಿಂತಿಸಿದ ರಾಮು.

'ಶ್ರಿತಪಾರಿಜಾತಃ' ಎಂದು ಧ್ವನಿ ಸಂಬೋಧಿಸಿತು.

ರಾಮು ಮೈ ಮರೆತು ಚಿಂತಾಂಬುಧಿಯಲ್ಲಿ ಈಸಾಡುತ್ತಿದ್ದ. ಅವನ ಬೆನ್ನಿನ ಮೇಲೆ ಗುದ್ದು ಬಿತ್ತು. ಆ ಧ್ವನಿ "ಸಮಸ್ತ ಕಲ್ಯಾಣ ಗುಣಾಭಿರಾಮಃ ಏನಾಯ್ತೋ ಬೇನೆ ನಿಂಗೆ? ಸೀತಾಮುಖಾಂಭೋ ರುಹ ಚಂಚರೀಕ, ಯಾಕೆ ಎಚ್ಚರ ತಪ್ಪಿದೆಯೋ" ಎಂದಿತು. ಹಾಗೆಂದ ಧ್ವನಿ ಕಿಟ್ಟುವಿನದು.

ರಾಮು ಸಮಾಧಿಯಿಂದ ಹೊರಕ್ಕೆ ಬಂದು "ಹಾ! ಹೂ! ಓ! ಎಲ್ಲೂ ಇಲ್ಲೋ ಅಲ್ವೋ- ಇಲ್ಲ. ಹೀಗೇ ಏನೋ ಯೋಚ್ನೇ ಮಾಡ್ತ ಹಾಗೇ ಹೋಗ್ತಿದ್ದೆ" ಎಂದು ಉತ್ತರಿಸಿದ.

"ಹ್ಯಾಗ್ಹ್ಯಾಗೆ ಹರೀತಿತ್ತು ಶ್ರೀಯುತರ ವಿಚಾರಧಾರೆ? ಹೋಗ್ಲೀ, ಏನೋ ಮಗೂ, ನಾಳೆ ರೋಮನ್ ಹಾಲಿಡೇ, ಜಿಬ್ರಾಲ್ಟರಿನಲ್ಲಿ ಗ್ರಿಗರಿ ಪೆಕ್ಕೋ, ಆಡ್ರಿ ಹೆಪ್ಬರ್ನ್. ಕರ್ಕೊಂಡು ಹೋಗ್ತೀನಂತ ನಿನ್ನೆ ಪತ್ರ ಬರ್ಕೊಟ್ಟಿದ್ದೆಲ್ಲಾ ಎಷ್ಟೊಹೊತ್ತಿಗೆ ಬರ್ಲಿ"

"ನಾಳೇ ಬೇರೇ ಯಾರ್ನೋ ಕರ್ಕೊಂಡು ಹೋಗ್ಬೇಕಾಗಿದ್ಯೋ ದುಡ್ಡು ಎಲ್ಲಿ? ಎಂತ ವಿಚಾರ ಧಾರೆ ಹರೀತಿತ್ತು"

"ಅಲ್ವೋ ನನಗಿಂತ ಹೆಚ್ಚಿನ ಹಿತವ ಅವನ್ಯಾರೋ ನಿನ್ಗೆ. ಸೀತೆಯ ಗಂಡ ರಾಮ ನಮೋ ಅಂತ ಹೇಳಿದ ಕೂಡ್ಲೆ ರುಕ್ಮಿಣಿ ಗಂಡ ಕೃಷ್ಣ ನಮೋ ಅಂತಲೇ ಭಜ್ನೇ ಮಾಡ್ತಾರಲ್ಲೋ. ನಿನ್ನ ಅವತಾರವಾದ ಕೂಡ್ಲೇ ನನ್ನ ಅವತಾರ"

"ಇಲ್ಲಜ್ಜಾ. ಬೇರೇಯಾರ್ನೋ ಕರ್ಕೊಂಡು ಹೋಗ್ಬೇಕು. ಕೈಲಿ ಕರಟ ಹುಣ್ಣಿಗೆ ಬರೇ ಹಾಕ್ಬೇಡಜ್ಜ"

ಲೋ! ಬಿಡೋ! ಆಗ್ದಿದ್ರೆ ಬೇಡ. ನೀನಲ್ದಿದ್ರೆ ನಿಮ್ಮಪ್ಪ. ನಿಮ್ಮಪ್ಪ ಯಾಕೆ? ನಮ್ಮಪ್ಪ."

"ನಿನ್ನ ಅಜ್ಜ ಆಗಲಜ್ಜ. ಹೋಗು ನೀನು. ನನ್ಗೆ ಈಗ ನಮ್ಮುತ್ತಾತನೇ ಗತಿ"

" ಹೋಗೋ! ಹೋಗೋ! ನಿನ್ನೆಂಟಾಣೆಗೆ ಬಾತ್ಕೊಂಡು ಬಂದಿಲ್ಲ ನಾನು ನಿನ್ನೇನೆ ನಮ್ಮಮ್ಮ ಒಂದೂವರೆ ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾಳೆ ನನ್ನ ಸಿನಿಮಾಕ್ಕೇ ಅಂತ"

"ಹಾಗಾದ್ರೆ ನನ್ನೂ ಕರ್ಕೊಂಡು ಹೋಗೋ"

"ಅದ್ಯಾರ್ನೋ ಕರ್ಕೊಂಡು ಹೋಗ್ಬೇಕೂ ಅಂತ ಬಡ್ಕೊಂಡೆಯಲ್ಲ ಹೋಗು ಅವರ್ಜೊತೆ. ನಿನಗೆ ದುಡ್ಡು ತೆತ್ರೆ ನನ್ತಂಗಿ ಸೀತಾ ನನ್ನ ನುಂಗಿ ಬಿಟ್ಟಾಳು. ಮೊನ್ನೆ ತಾನೇ ಮಹಿಳಾ ಸಮಾಜದಲ್ಲಿ 'ಪುರುಷರು—ಮುಂದಿನ ತಲೆ ಮಾರಿನ ಗುಲಾಮರು' ಎಂತಾ ಲೆಕ್‌ಚರ್ ಬಿಗ್ದಿದ್ದಾಳೆ. ನಾನೊಬ್ಬೇ ಹೋಗ್ತೀನಿ ಅಂತ ಅಲ್ಟಿಮೇಟಂ ಕೊಟ್ಟಿದ್ದಳು. ಅಮ್ಮನೇ ಅವಳನ್ನು ಬೈದು ನನ್ನ ಜೊತೇ ಹೋಗು ಅಂತಾ ಒಪ್ಪಿಸಿದಳು. ಸರಿ ...ನನ್ಗೆ ಹೊತ್ತಾಯ್ತು. ನಾಳೆ ಸಿನಿಮಾಕ್ಕೆ ಬಾ ಬಾಲ್ಕನಿಗೆ ತಾನೇ? ಟಾಟ್ಟಾ!" ಎಂದು ಕಿಟ್ಟು ಹೋಗಿ ಬಿಟ್ಟ.

ರಾಮು ಮುಂದುಗಾಣದೆ ಸ್ತಬ್ಧನಾಗಿ ಹತ್ತು ನಿಮಿಷ ಕಂಭದಂತೆ ನಿಂತು ಬಿಟ್ಟ. ಬಳಿಕ 'ಯುರೇಕಾ' ಎಂದು ಕೂಗಿದ. 'ಮಿಲ್ಯಾ' ಎಂದು ಲೊಟಗೆ ಹೊಡೆದ. ಕುಣಿದ, ಕುಪ್ಪಳಿಸಿದ. ಇದ್ದರೆ ಇದೇ. ಇದಿಲ್ಲದಿದ್ದರೆ ಇಲ್ಲವೇ ಇಲ್ಲ ಎಂದು ನಿರ್ಧರಿಸಿದ. ರಾತ್ರಿ ನಿಶ್ಚಿಂತನಾಗಿ ಮಲಗಿದ.

ರಾಮು ಎದ್ದ. ಕ್ಷೌರಮಾಡಿಕೊಂಡ. ಇಸ್ತ್ರಿ ವಸ್ತ್ರ ಧರಿಸಿದ. ಅಕ್ಟೋಬರ್ ಕ್ರಾಂತಿಯ ದಿನದಂದು ಸಮತೆಯನ್ನು ಸ್ವಾಗತಿಸಲೆಂದು ಕೆಂಪು ಚೌಕದಲ್ಲಿ ನಿಂತ ಲೆನಿನ್ನಂತೆ ಬಂದು ಮುಗಿಲ ಹಳ್ಳಿಯ ನೆಹರೂ ಚೌಕದಲ್ಲಿ ನಿಂತ. ಗುರುಕೃಪೆಗಾಗಿ ಕಾದು ನಿಂತ ಶಿಷ್ಯನ ಕಾತರ ಅವನಲ್ಲಿ ತುಂಬಿತ್ತು. 'ಪುರುಷರು—ಮುಂದಿನ ತಲೆ ಮಾರಿನ ಗುಲಾಮರು' ಎಂದ ಭಾಷಣಕರ್ತೆಯೊಡನೆ ಸಿನಿಮಾಕ್ಕೆ ಹೋಗಬೇಕೆಂಬ ನಿರ್ಧರ ಅವನಲ್ಲಿ ಅಚಲವಾಗಿತ್ತು.

ಎಂಟು—ಒಂಭತ್ತು—ಹತ್ತು: ಥಣ್. ಬಂದೇ ಬಂದ ಕಿಟ್ಟು—ಮನೆ ಬಿಟ್ಟು. ಅವನ ಜೊತೆಯಲ್ಲಿ ಸೀತಾ. ಅವಳನ್ನು ನೋಡಿ ರಾಮು, ಪುರುಷರು ಮುಂದಿನ ತಲೆಮಾರಿನ ಗುಲಾಮರಲ್ಲ. ಇಂದೇ ಗುಲಾಮರು ಎಂದುಕೊಂಡ. ಒಂದು ಕ್ಷಣ ಮುಂದಿನಕ್ಷಣ ಅವನ ಮನಸ್ಸು ಬೆಟ್ ಕಟ್ಟಿದ್ದನ್ನು ಜ್ಞಾಪಿಸಿಕೊಂಡಿತು. ರಾಮು ಕೆಮ್ಮಿದ. ಕಿಟ್ಟು ನಿಂತ. ತಿರುಗಿದ. ನೋಡಿದ.

"ಏನೋ ರಾಮು" ಎಂದು ಮಾತನಾಡಿಸಿದ.

ಸೀತಾ ಕಿಟ್ಟುವನ್ನು ತಟ್ಟಿ 'ಯಾರೋ ಇವನು' ಎಂದಳು. (ಕಿಟ್ಟು-aside "ಉಷ್! ಸುಮ್ನಿರು ಸೀತಾ. ಇವ್ನೇ ರಾಮು champion goof:) ಸುಮ್ನೇ ಹೀಗೇ ಹೊರ್ಟೆ ಕಣಜ್ಜ.

" ನೀನು ಸುಮ್ನೇ ಹೀಗೆ ಹೋಗ್ದೆ ಇದ್ದದ್ಯಾವತ್ತು? ರಾಮು ಕೇಳಿದ.

'ಬಾ ಕಿಟ್ಟು ಹೊತ್ತಾಗುತ್ತೆ ಎಂದಳು ಆ ಬಾಲೆ.

ರಾಮು ಗಂಟಲು ಸರಿಮಾಡಿಕೊಂಡು-ಎಲ್ಲಿಗೆ ಹೊರಟೆಯೋ ಎಂದ 'ಸಿನಿಮಾಕ್ಕೆ ಕಣೋ' ಎಂದ ಕಿಟ್ಟು.

ರಾಮುವಿನ ಕಾಲು ಕಂಪಿಸಿತು. ಮೂರ್ಛೆ ಬರುವಂತಾಯ್ತು. ಆದರೆ ಹತ್ತು ರೂಪಾಯಿಯನ್ನು ನೆನೆದ. ಬಲ ಬಂತು.

'ನಾನೂ ಬಂದೆ ನಡಿಯೋ' ಎಂದ. ಹೊರಟೇ ಬಿಟ್ಟ ಅವರ ಜೊತೆ. ಹೇಳುವುದಕ್ಕೂ ಕೇಳುವುದಕ್ಕೂ ಸಮಯವಲ್ಲ ಅದು. ಮುಂದಿನ ತಲೆಮಾರಿನ ಹೊತ್ತಿಗೆ ಪುರುಷರನ್ನು ಗುಲಾಮಗಿರಿಗಿಳಿಸಲು ಹೊಂಚು ಹಾಕುವವರು, ಈ ತಲೆ ಮಾರಿನಲ್ಲಿ ಅಜ್ಞಾತರೊಡನೆ ಸಿನಿಮಾಕ್ಕೆ ಬರಲು ತಯಾರಿರಲೇ ಬೇಕು ಎಂದು ರಾಮು ವಾದಿಸಿದ—ಅವನ ಮನಸ್ಸಿನಲ್ಲಿ, ಅವನ ವಾದ ಸರಿ.

3. ಶೋ

ಹೀಗಾಗಿ, ಕಿಟ್ಟು ಸೀತಾ, ಥೇಟರ ಜಿಬ್ರಾಲ್ಟರಿನ ಬಾಲ್ಕನಿಯ ಮೇಲೆ ಕುಳಿತಿದ್ದಾಗ, ರಾಮು ತನ್ನ ಮನೆ ದೇವರನ್ನೂ, ಮುಗಿಲ ಹಳ್ಳಿ ಕೆರೆಯ ಏರಿ ಮೇಲೆ ನೆಲೆಸಿದ ಚೌಡಮ್ಮನನ್ನೂ ನೆನೆದು, ಸೀತಾದೇವಿಯವರ ಪಕ್ಕದಲ್ಲಿ ಬಂದು ಕುಳಿತು ಬಿಟ್ಟ. ಯಾರೂ-ಪರ್ಮಿಷನ್ ಕೊಟ್ಟಿರಲಿಲ್ಲ. ಆದರೂ ಪರ್ಮಿಷನ್ ಬೇಕಾದರೂ ಏಕೆ? ಕಿಟ್ಟು 'ರಾಮು'! ಎಂದ. ರಾಮು 'Behave your self!' ಎಂದು ಬಿಟ್ಟ. ಸ್ವಲ್ಪ ಹೊತ್ತಿಗೆ ಕಿಟ್ಟುವನ್ನು ಯಾರೋ ಗೆಳೆಯ ಕರೆಯಲು ಅವನೆದ್ದು ಹೋದ. ರಾಮು ಬೋಳಿಸಿದ ಮೀಸೆಯ ಮೇಲೆ ಕೈಯಾಡಿಸಿ ಥೇಟರಿನಲ್ಲಿ ಸುತ್ತಲೂ ನೋಡಿದ. ರಾಮಚಂದ್ರ ರಾಮುವಿನ ಮುಂದಿನ ಸೀಟಿನಲ್ಲೇ ಕುಳಿತಿದ್ದ. ರಾಮು ಅವನನ್ನು ಕಾಲಲ್ಲಿ ಕಿಕ್ಕಿ ಮೆಲ್ಲನೆ 'shell down ten' ಎಂದ. ಅಷ್ಟರಲ್ಲೇ ಥೇಟರ ಹಿಂಭಾಗದ ದನಿಯೊಂದು 'ಕಾಲ ಕೆಟ್ಟಿತು ಕಣೋ!' ಎಂದಿತು. 'ಅದಕ್ಕೇ ಕಣೋ ಮಳೆ ಬರಲಿಲ್ಲ!' ಎಂದು ಮತ್ತೊಂದು ದನಿ ಉದ್ಗರಿಸಿತು. ನಾಲ್ಕಾರು ಗಂಟಲುಗಳು ಅರ್ಥ ಪೂರ್ಣವಾಗಿ ಕೆಮ್ಮಿದುವು. ನೂರೈವತ್ತು ಕಣ್ಣುಗಳು ರಾಮು, ಸೀತಾ ಇವರ ಕಡೆ ತಿರುಗಿದವು. ಸೀತೆಯ ಮುಖ ರೋಷದಿಂದ ಕೆಂಪೇರುತ್ತಿತು.

ಮೂರಾರು ಧ್ವನಿಗಳು ನಕ್ಕವು. ಕಿಟ್ಟು ಗೆಳೆಯನೊಡನೆ ಹೊರಕ್ಕೆ ಹೋಗಿ ಬಿಟ್ಟಿದ್ದ.

'ಇದೇನು ಮುಗಿಲು ಹಳ್ಳೀನೋ ಪ್ಯಾರಿಸ್ಸೋ?' ಎಂದು ಒಂದು ಪ್ರಶ್ನೆ ಸ್ಪಷ್ಟವಾಗಿ ಕೇಳಿಸಿತು. ರಾಮಚಂದ್ರ 'ಪತಿತ ಪಾವನ ಸೀತಾರಾಮ' ಎಂದು ಎಲ್ಲರಿಗೂ ಕೇಳುವಂತೆ ಒದರಿದ. ಕೆರೆ ಏರಿಯ ಚೌಡಮ್ಮನನ್ನೂ, ಮನೆದೇವರನ್ನೂ ಸ್ಮರಿಸುತ್ತಿದ್ದ ರಾಮು ಎಚ್ಚತ್ತು, ರಾಮಚಂದ್ರನನ್ನು ಮತ್ತೊಮ್ಮೆ ಕಾಲಿನಿಂದ ಕಿಕ್ಕಿದ. ರಾಮಚಂದ್ರ ವಿಲಿವಿಲಿ ಒದ್ದಾಡುತ್ತಾ ಒದೆ ತಿಂದ ನಾಯಿಯ ಸದ್ದನ್ನು ಹೊರಗೆಡಹಿದ. ರಾಮು-ಪುರುಷರು-ತಲೆಯಿಲ್ಲದ ಕುರಿಗಳು ಎಂದು ಉದ್ಗರಿಸಿದ.

ಅಷ್ಟು ಹೊತ್ತಿಗೆ ಕಿಟ್ಟು ಬಂದ. 'ಹಾಳು ಸಿನಿಮಾ ಎಷ್ಟು ಹೊತ್ತಿಗೆ ಆರಂಭವಾಗುತ್ತೋ ಏನೋ' ಎಂದ.

ಸೀತಾ–'ಏನು ಸೆನ್ಸ್‌ಲೆಸ್ಸ್ ಜನಾನ್ರೀ ನಮ್ಮೂರೋರು, ಮಿ. ರಾಂರಾವ್?' ಎಂದಳು. ರಾಮುವಿಗೆ ಪ್ರಶ್ನೆಗೆ ಉತ್ತರ ತಿಳಿಯಲಿಲ್ಲ. ಪುರುಷರು–ಬೆನ್ನು ಮೂಳೆಯಿಲ್ಲದ ಹುಳುಗಳು ಎಂದು ಅವನು ಉತ್ತರಿಸಿದ.

ಅಷ್ಟರಲ್ಲಿ ರಾಮಚಂದ್ರ ಎದ್ದು ಹೊರಕ್ಕೆ ಹೊರಟು ಬಾಗಿಲು ತಲುಪಿದ್ದ. ಎರಡು ಕಿಕ್ಕುಗಳು ಅವನ ಬೆನ್ನು ಮೂಳೆಯನ್ನು ಮುರಿದಿದ್ದವು. ಹತ್ತು ರೂಪಾಯಿ ಬೆಟ್ ಕಟ್ಟಿ, ಕೈ ಸುಟ್ಟಿತ್ತು. ರಾಮು ಇಂತಹ ಧೈರ್ಯಶಾಲಿಯೆಂದು ಅವನಿಗೇನು ಗೊತ್ತು. ಆದುದರಿಂದ ಪಲಾಯನ ಮಾಡಿ ಮೂರು ದಿವಸ ಮರೆಯಲ್ಲಿ ಅಡಗಿದ್ದು ನಂತರ ಬೆಟ್ ಕಟ್ಟಿಲ್ಲವೆಂದರಾಯ್ತು ಎಂದು ಅವನು ನಿರ್ಧರಿಸಿ ಹೊರಟಿದ್ದ. ಬಾಗಿಲು ದಾಟುವಷ್ಟರಲ್ಲಿ ಅವನ ಬೆನ್ನು ಮೇಲೆ ಮತ್ತೊಂದು ಗುದ್ದು ಬಿತ್ತು. 'ಹತ್ತು ರೂಪಾಯಿ ಬಿಡಿಯೋ ಮಗನೇ' ಎಂದು ರಾಮು ಹಿಂದೆ ನಿಂತು ಗರ್ಜಿಸಿದ. ಆದರೆ ಅಷ್ಟರಲ್ಲಿ ತೆರೆಯ ಮೇಲೆ M. G. M. ಸಿಂಹ ಗರ್ಜಿಸಿತು. ಆರ್ಕೆಸ್ಟ್ರಾದ ಗೊಂದಲ ಆರಂಭವಾಗಿತ್ತು. ರಾಮಚಂದ್ರ ತಡವರಿಸುತ್ತಿದ್ದಾಗಲೇ ರಾಮು ಅವನ ಜೇಬಿಗೆ ಕೈ ಹಾಕಿ ಅಲ್ಲಿದ್ದ ಹತ್ತರ ಒಂದೇ ಒಂದು ನೋಟನ್ನು ಎತ್ತಿ ರಾಮಚಂದ್ರನನ್ನು ಹೊರದೂಡಿದ.

—ಅ. ರಾ. ಸೆ.

——o——

ಅಡಿಗರದಲ್ಲ, ಯಾವುದೋ ಬೇರೆ

ಅಡಿಗರದಲ್ಲ,–ಯಾವುದೋ ಬೇರೆ–
ಅಡುಗೆಯ ಮನೆಗೂ ಬೀಸಿತು ಗಾಳಿ
ಅಲ್ಲಿಯು ಇರುವುದು ಸಾಹಿತ್ಯ
ಅದನೂ ಕೆಡಿಸಿತು, ಆ ಗಾಳಿ!
ಹಾಳು ಬಡಿಯಿತು ಹುಳಿಗಳಿಗೆಲ್ಲ,
ಮೆಂತ್ಯದ ಹಿಟ್ಟಿಗು ಸಂತೆಯ ಗೊಂದಲ!
ಕುಂಬಳಕಾಯಿ ಕೂಟಿಗೆ ಸೊಗದೆ ಬೇರನ್ನರೆದು ಬೆರೆಸುವರಯ್ಯೊ!
ಹಾಲಿಗೆ ನಿಂಬೆ
ಹೋಳುಗಳೊಂದೊಂದಲ್ಲೂ ಇಲ್ಲೂ ಬೇವಿನ ರಂಬೆ
ಹಾಗಲ ಹಲಸು ಬಾಳೆಯಹಣ್ಣು
ಪಡವಲಕೋಸು ಹಸಿಹಸಿ ಮಣ್ಣು
ಸೇರಿಸಿ ಬೇಯಿಸಿ ಬಲು ರುಚಿ ಎಂಬುದು
ಪಚ್ಚಡಿ ತೊವ್ವೆ ಶಾವಿಗೆ ಪಾಯಸ
ಕಲಿಸಿದ ಮೇಲೆ, ಕರ್ಪೂರ ಬೆರಸಿ
ಬಡಿಸುವರಣ್ಣಾ, ಬಿಸಿಬಿಸಿಯಲ್ಲೇ.
ಸಾರಿಗೆ ಕೇಸರಿ, ಖೀರಿಗೆ ಸಾಸುವೆ,–
ಮಾಮೂಲಡುಗೆಯ "ಮಾರೋ" ಎನ್ನುತ
ಮಂಡಿಗೆ ಮಾಡು ಮಡಕೆಯನೊಡೆದು
ಉದ್ದಿನ ಹಿಟ್ಟಿಗೆ ಗಂಧವ ತೇದು ಸೊಪ್ಪನು ಕುಯ್ದು,
ಮದ್ದಳೆ ಮೇಲೆಯೇ ನವನವ ಮಂಡಿಗೆ
ಕೇಳುವರೆಮ್ಮನು ನವನವ ನಳರು–
ತಳಮಳ ತುಂಬಿದ ಅಡುಗೆಯ ಮನೆಯಿಂ
ತಳಸೀದಿರುವಾ ಹುಳಿಯೇ ಸಹಜ
ಬಂಜರು ಭೂಮಿಯ ಕುಂಜರ ಕವಿಗಳು–
ಎಲಿಯಟ್ಟ್ಯಾಡನ ಕಾವ್ಯವನೆಂದೂ
ಗಲಿ ಬಿಲಿಯಿಂದಲಿ ಓದಲೆ ಇಲ್ಲವೆ?
ಎನ್ನುತ ಸೌಟಲಿ ಬಡಿಸುವರು;
ತಿಂದರೆ, ತಕ್ಷಣ, ವಾಕರಿಕೆ.

— ಕಾಮತ್.

ನಾಜೂಕು ನಾಗಮ್ಮ

“ನೋಡಿ ನಾಚ್ಕೊ ನಾಗಮ್ಮನ್ನ” ಎಂದು ನಮ್ಮತ್ತೆ ಸೋಟೆ ತಿವಿಯುವ ಧಾಟಿಯಲ್ಲಿ ಬೈದರು. ‘ಅತ್ತೆ ಎಂಬ ಕುತ್ತ ಸದಾ ಕುಕ್ಕುವುದೇ ಧರ್ಮ’ (ಕುತ್ತ ಎಂಬುದು ಉರ್ದೂ ಪದ ಎಂಬುದನ್ನು ವಾಚಕರು ಗಮನಿಸಿದರೆ ಸಾಕು) ಎಂದು ಲೋಕ ಧರ್ಮವೇ ಇದೆ ಎಂದು ನೀವು ಅನ್ನಬಹುದು. ಆದರೆ ನಾನು ನಾಗಮ್ಮನಿಗಿಂತ ನಾಜೂಕು, ನಯ, ವಿನಯ ಸಂಪನ್ನೆ ಎಂದು ನಮ್ಮ ಯಜಮಾನರೇ ಹೇಳಿದ್ದಾರೆ. ಅವರು ಈ ಮಾತು ಹೇಳಿದಾಗ ನಾನು ರವಷ್ಟು ವರಟಾಗಿ ವರ್ತಿಸಿದೆ. ಕಾರಣ ಇಷ್ಟೆ—ಅವರಿಗೆ ನಾಗಮ್ಮನ ವರಟುತನದ ವಿಚಾರ ಹೇಗೆ ಗೊತ್ತಾಯಿತು? ನನ್ನ ನಾಜೂಕು, ನಯ, ವಿನಯ ಹೇಳಿದರೆ ಒಪ್ಪಬಹುದು ಆದರೆ ಹಾಗೆ ಒಪ್ಪುವಾಗ ನಾಗಮ್ಮನ ಸಾಮ್ಯ ಉಪಯೋಗಿಸಿದರೆ ನಾನು ಹೇಗೆ ಸಹಿಸೆನು? ಅತ್ತೆಯ ಕುತ್ತ ತನದ ಜೊತೆ ಗಂಡನ ಭಂಡತನವೂ ಗುಂಡಿನಂತೆ ಬಂದೆರಗಬೇಕೆ?

“ಸಾಕು ಸುಮ್ನಿರಿ ನೀವು ಮಾತಾಡದಿದ್ದರೇ ಚೆನ್ನ” ಎಂದು ನಕ್ಕಾಗ ಕಾಣುವ ಅವರ ಹುಳಿತ ದಂತಾವಳಿಯನ್ನು ಮುಚ್ಚುವಂತೆ ಚುಚ್ಚಿ ಬೈದಿದ್ದೆ—ಮುಗುಂ ಆಗಿ ಬಾಯಿ ಮುಚ್ಚಿ ಎಂದು.

“ಯಾಕೆ ಕೋಪ” ಎಂದರು ನನ್ನ ರಾಜ.

“ರಾಜಾ....” ಎಂದೆ. ಅತ್ತೆಯ ಮೇಲೆರಡು ಮಾತು ಹೇಳಿ ಹೃದಯ ಹಗುರುಮಾಡಿಕೊಳ್ಳುವ ಧ್ವನಿಯಲ್ಲಿ.

“ಗುಲಾಮ” ಎಂದರವರು. ತಾಯಿಯ ಮುಂದೆ ತಾವು ಗುಲಾಮರೆನ್ನುವ ಅಸಹಾಯಕ ಧ್ವನಿಯಲ್ಲಿ. ನನಗೆ ರೇಗಿತು.

“ಕಾಕರಾಜಾ” ಎಂದೆ ನನ್ನ ಕೈಹಿಡಿದ ಕರಿರಾಜರನ್ನು—ಗಂಡಹೆಂಡಿರಿಬ್ಬರೇ ಇದ್ದೆವೂನ್ನಿ ಆಗ. ನನ್ನ ಮಾತಿಗೆ ನಾಚಿದ ನಾಗರಾಜನ ಕರಿ ಕೆನ್ನೆಯೂ ಕೆಂಪಾಯಿತು.

“ಎನ್ನ ಪ್ರೇಮದ ಆಠೀನ್ ರಾಣೀ” ಎಂದು ತಾವು ಸಂಜೆ ಒಂಭತ್ತರತನಕ ಕೈಯಲ್ಲಿ ಜೋಡಿಸಿ ಆಡಿಸುವ ಇಸ್ಪೀಟು ರಾಣಿಯೇ ನಮಗೆ ಪ್ರಾಣ ಎನ್ನುವಂತೆ

ಹೇಳಿದರು. ಒಮ್ಮೆಯೂ ವ್ಯೈದಡವದೆ—ಸಧ್ಯ ಇಲ್ಲಿಂದ ಕಾಲು ತೆಗೆದರೆ ಸಾಕೆನ್ನುವ ಆತುರದಲ್ಲಿ ಕ್ಲಬ್ಬಿನ ಕಡೆ ಹೊರಟರು.

ಕಾಲ ಬದಲಿಸಿದೆ ಅನ್ನುತ್ತಾರೆ, ತಳಕೆಳಗಾಗಿದೆ ಸೊಸೆಯುಂದಿರದೇ ಈ ಕಾಲ, ಸೊಸೆಯ ತಾಳಕ್ಕೆ ಗಂಡ ಕುಣಿತಾನೆ, ಅತ್ತೆಯ ಕುಣಿತ ಸೊಸೆಯ ತಾಳಕ್ಕೇ ಹೆಜ್ಜೆ ಹಾಕಬೇಕು ಎಂದೆಲ್ಲಾ ಜನ ಅನ್ನುತ್ತಾರೆ. ನನ್ನ ವಿಚಾರದಲ್ಲಿ ಅದೆಲ್ಲಾ ಸುಳ್ಳು. ಅತ್ತೆಯದೇ ಸಂಗೀತ—ಇವರದೇ ತಾಳ—ಗೆಜ್ಜೆ ಕಟ್ಟಿರುವವಳು ನಾನೆ. ನನಗೆ ಇನ್ನೇನೂ ಆಶ್ಚರ್ಯವಿಲ್ಲ—ಲಂಖಿಣಿಯಂತಹ ಅತ್ತೆಯನ್ನು ಆ ನಾಗಮ್ಮ ಹೇಗೆ ತನ್ನ ತಾಳಕ್ಕೆ ಮೇಳೈಸುವಂತೆ ಮಾಡಿದಳು ಎಂಬುದು. ನಮ್ಮತ್ತೆ ಕೂಡಾ ನಾಗಮ್ಮ ನನ್ನೇ ಕೊಂಡಾಡುತ್ತಾರೆ. ಬೆಳಗಿನಿಂದ ಸಂಜೆ ತನಕ ದುಡಿಯುವುದೇ ನನ್ನ ಕರ್ಮವಾಯಿತು. ಏನು ಮಾಡಲಿ? ಎಂದು ಎದುರು ಮನೆ ನೋಡಿದಾಗ ಎಳೆ ಬಿಸಿಲಲ್ಲಿ ನಾಗಮ್ಮ ನೀರು ಹಾಕಿಕೊಂಡ ತಲೆ ಆರಿಸಿಕೊಳ್ಳುತ್ತಿದ್ದಳು—ಅವರ ಅತ್ತೆ ಬಿಸಿ ಕಾಫಿ ಹಿಡಿದು "ಬಾರೆ ನಾಗು ಕಾಫಿ ಕ್ಡು" ಎಂದು ಉಪಚರಿಸುತ್ತಿದ್ದರು. ಮನೆಯ ಮುಂದಿನ ದಾಳಿಂಬೆ ಮರದ ಕೆಳಗೆ ಕುಳಿತು ಕಾಫಿ ಕುಡಿಯತೊಡಗಿದಳು ನಾಗಮ್ಮ. ನಮ್ಮತ್ತೆ ಒಳಗೆ ಅಡಿಗೆ ಬೇಯಿಸುತ್ತಿತ್ತು. ನಾಗಮ್ಮನ ಅತ್ತೆ ಒಳಕ್ಕೆ ಹೋಯಿತು. ನಾನು ನನ್ನ ದುಃಖ ತೋಡಿಕೊಂಡು ನಾಗುನನ್ನಾದರೂ ಮೊರೆ ಹೊಕ್ಕು ಅವಳ ನಾಜೂಕು ಕಲಿಯೋಣವೆಂದು ಆ ಕಡೆ ಕಾಲಿಳಿದೆ.

"ಬನ್ನಿ" ಎಂದಳು ನಾಗು. ನಿಜಕ್ಕೂ ನಾಗಮ್ಮ ನನಗಿಂತ ವರಟು ಎಂದು ಅವಳ ಗೊಗ್ಗರ ಧ್ವನಿಯೇ ಸಾರಿತು

"ನಾಗಮ್ಮನೋರೇ ಎದ್ಕೊಂಡ್ರಾ" ಎಂದೆ.

"ಅದನ್ನೇನು ತಿರುಗಿ ಕೇಳೋದೂ — ಬಿಸಿಲಲ್ಲಿ ತಲೆ ಕಾಯಿಸ್ತಿರೋದೇ ಕಾಣೊಲ್ವೇ" ಎಂದು ರಪ್ಪನೆ ರಾಚಿದಂತೆ ಉತ್ತರಿಸಿದಳು ನಾಗಮ್ಮ. ಅಯ್ಯೋ ನನ್ನ ನಾಜೂಕೇ ಎಂದುಕೊಂಡು ಉಗುಳು ನುಂಗಿದೆ.

"ನಿಮ್ಮನ್ನ ಒಂದು ವಿಚಾರ ಕೇಳಬೇಕಿತ್ತು" ಎಂದು ಬಂದ ಕೆಲಸ ಮುಗಿಸಿ ಹೋಗಲು ಹವಣಿಸಿದೆ. "ನನ್ನೇನು ಕೇಳೋದು—ನಿಮ್ಮ ಯಜಮಾನ್ರನ್ನ ಕೇಳಿ" ಎಂದು ಮೇಲೇ ಬೀಳುವಂತೆ ಕೆರಳಿ ಹೇಳಿದಳು. ನನ್ನ ಎದೆ ಹೊಡೆದುಕೊಳ್ಳಲು ಪ್ರಾರಂಭಿಸಿತು. ವಿಚಾರ ವಿವಾದಕ್ಕೆ ಎಡೆಕೊಡಲು ಪ್ರಾರಂಭಿಸಿತು.

"ಯಾಕೆ ಕೋಪ ನಾಗಮ್ಮನೋರೇ....ಹುಂ ನಂದೇ ಗ್ರಹಚಾರ....ನೆರೆಹೊರ್ಕೆ ಅಂತ ಇರೋ ದುಃಖ ತೋಡ್ಕೊಳ್ಳೋಕೆ ಬಂದ್ರೆ ಹುಲಿ ಹಾಗೆ ಎಗರಿಬೀಳ್ತೀರ"— ಎಂದು ಹೊರಡಲನುವಾದೆ.

ಕೋಪಕ್ಕಲ್ಲ....ಕೂತ್ಕೊಳ್ಳಿ .. ಅಮ್ಮಾ ಅಮ್ಮಾ... ಇನ್ನೊಂದ್ಲೋಟ ಕಾಫಿ" — ಎಂದು ಕೂಗಿದಳು ನಾಗಮ್ಮ.

"ಈಗ ನಿಮಗೆ ಕಾಫಿ ಕೊಟ್ಟೋರು ನಿಮ್ಮತ್ತೆ ಅಲ್ವೆ?"

ಅಲ್ಲ ನಮ್ಮ ತಾಯಿ—ನಮ್ಮತ್ತೆನ್ನ ಓಡ್ಸಿದ್ದು ನಾನು ಬಂದ ಮೂರು ತಿಂಗಳಿಗೇ"

"ಮತ್ತೇ ನಮ್ಮತ್ತೆ ಹೇಳಿದರು ನೀವು ತುಂಬಾ ನಾಜೂಕಂತೆ....ಸದಾ ನನ್ನ ಬೈತಾರೇ...."

"ಹ ಹ ಹ್ಹ....ಮೀನಾಕ್ಷೀ ನೀನು ಇನ್ನೂ ಎಳಸು. ಒಂದು ವಿಚಾರ.... ನನ್ನ ಯಜಮಾನ್ರು ಹೇಳಿದರು....ಹೇಳಿದರೇನೂ ಬೈದರು....ಬೈದರೂನ್ನೊಕ್ಕಿಂತ ಬೆದರಿಸಿದರೂನ್ನು — ಏಕೆಂದ್ರೆ ನನಗೆ ಬೈಸಿಕೊಂಡು ಅಭ್ಯಾಸವಿಲ್ಲ .. ಬೆದರಿಸಿದರೂನ್ನೊ ಕಿಂತ ಬಿನ್ನೈಸಿಕೊಂಡ್ರೂಂದ್ರು ಆಯ್ತು... ಎದುರು ಮನೆ ಮೀನಾಕ್ಷಮ್ಮನಿಗಿರೊ ನಾಜೂಕು ನಿನಗಿಲ್ಲ' ಎಂದು ಅವರನ್ನಬಹುದೆ?....ನನಗೆ ರೇಗಿಬಿಡ್ತು....ಈ ಗಂಡಸರ ಮಾತು...."

"ಹಾಗನ್ನಿ....ನಾನೂ ಹೇಳೋಕೆ ಸಂಕೋಚಪಟ್ಕೊಂಡೆ ನಮ್ಮೆಜಮಾನ್ರು ಹೇಳಿದರು 'ನಾಗಮ್ಮನ ನಾಜೂಕು ನಿನಗೆ ಬರೋಲ್ಲಾಂತ' ಗಂಡಸರೇ ಹಾಗೆ ಬಿಡಿ."

"ಹಾಗೆ ಬಿಡೊಕಾಗುತ್ತ್ಯೆ? 'ಏನು ನಾಜೂಕು ನೀವು ಕಂಡದ್ದು' ಎಂದು ಕೆಂಡ ಕಾರಿದೆ....ಅಲ್ಕಣೇ ಅವರ ಮನೆ ಮುಂದಿನ ರಂಗೋಲಿ ನಾಜೂಕು ನೋಡಿ ಅಂದದ್ದೂಂತ ತೊದಲಿದರು...."

ಆಯ್ಯೋ. ನಮ್ಮನೆ ಮುಂದೆ ರಂಗೋಲಿ ಇಕ್ಕೋಳು ಮನೆ ಕೆಲಸಗಿತ್ತಿ ಕಾಣ್ರೇ....ನಾನೂ ಕೇಳ್ದೆ ನಮ್ಮನೆಯವರನ್ನ 'ನಾಗಮ್ಮನ ನಾಜೂಕೇನು ನೀವು ಹೇಳೋದೂಂತ....ಆಯ್ಯೋ ಮನೆಮುಂದಿನ ಫರದೆ ಮೇಲಿನ ಕಸೂತಿ ಕುಶಲತೆ ನೋಡೇಂತ' ಬಡಬಡಿಸಿದರು...."

"ರಾಮ ರಾಮಾ... ಕಸೂತಿ ಹಾಕಿದ ಫರದೇನೇ ನಾವು ಕೊಂಡಿದ್ದು...."

—ಎನ್ನುವ ವೇಳೆಗೆ ನಾಗಮ್ಮನ ಅಮ್ಮ ಕಾಫಿ ತಂದುಕೊಟ್ಟರು. ಸೊಗಸಾದ ಕಾಫಿ. ನಮ್ಮನೇಲಿ ನಮ್ಮತ್ತೆ ಕೊಡೋ ಕಾಫಿ ಕಹಿ ಕಷಾಯ....ಆನಂದವಾಗಿ ಕುಡಿದೆ....

"ರೇಗಿದ್ದಕ್ಕೆ ಕೋಪವೆ?" ಎಂದಳು ನಾಗು. "ಅಲ್ಲಾ ಈ ಗಂಡಸರಿಗೆ ಯಾವ ಮಾತು ಎಲ್ಲಿ ಆಡಬೇಕೂನ್ನೋದೆ ಗೊತ್ತಿಲ್ಲ."

"ಮಾತೇ ಆಡಿ ಗೊತ್ತಿಲ್ಲ ಅವಕ್ಕೆ....ಈಗ ನಾವು ನಾವು ಎಷ್ಟು ಚೆನ್ನಾಗಿ ಅರ್ಥಮಾಡ್ಕೊಂಡು ವಿಷಯ ತಿಳ್ಕೊಂಡ್ಬಿ ನೋಡಿ....ಅಷ್ಟೆ....ನಿಮ್ಮತ್ತೆನ್ನ ನಿಮ್ಮಿಂದ ಬೇರ್ಪಡಿಸೋಕೆ ನಾನು ಮಾರ್ಗ ಮಾಡ್ತೀನಿ....ಎಲ್ಲಾ ನಮ್ಮಮ್ಮಂದೇ ಕೆಲಸ ಅವರ ಮುಂದೆ ನನ್ನ ಹೊಗಳಿ ಹೀಗಾಗಿದೆ...."

"ಹಾಗಾದ್ರೆ ನಿಮ್ಮ ನಾಜೂಕೂ...."

"ನೆಗೆಡುಬಿತ್ತು ನಾಜೂಕೇನು ಬಂತು....ಮೇಲು ತೋರ್ಕೆಗೆ ಹಾಗಿರಬೇಕು. ನಾವುಗಳು ತೀರ ನಯವಾದರೆ ಈ ಗಂಡಸರ ಪರಟುತನಕ್ಕೆ ನಿಭಾಯಿಸೋಕೆ ಸಾಧ್ಯವೆ?...."

"ಸರಿ, ನಾಗಮ್ಮಾ....ನಾನು ಬರ್ಲೆ?" ಎಂದು ಹೊರಟಾಗ ನಮ್ಮತ್ತೆಯನ್ನ ಓಡಿಸಬಲ್ಲ ಕಿಲಾಡಿತ್ವ ಕಂಡೆ ನಾನು ಕಣ್ಣಲ್ಲಿ....ಕುಂಕುಮ ಹಚ್ಚಿಕೊಂಡು ಮನೆ ಸೇರಿದಾಗ ಅತ್ತೆಮ್ಮ ಲಟ್ಟಣಿಗೆ ಹಿಡಿದು ನಿಂತಿದ್ದರು....

"ಎಲ್ಲಿಗೆ ಹೋಗಿದ್ಯೇ...." ಎಂದು ಅಬ್ಬರಿಸಿದರು.

"ನಾಗಮ್ಮನ ಮನೆಗೆ ನಾಜೂಕು ಕಲಿಯೋಕೆ" ಎಂದು ನಾಜೂಕಾಗಿ ಹೇಳಿದೆ.

—ನಸುನಕ್ಕು 'ಸಧ್ಯ ಬುದ್ಧಿವಂತೆಯಾದೆ' ಎಂದು ಮುದ್ದಿಸಿ ಕರೆದೊಯ್ದರು. ಒಳಗೆ ಒರಟು ನಗೆ ನಗುತ್ತಿದ್ದೆ. ಹೊರಗೆ ನಾಜೂಕಿನ ಮುಸುಕು ಹಾಕಿ ಆ ನಗುವನ್ನು ನಯವಾಗಿ ತೂರಿಬಿಡುತ್ತಿದ್ದೆ. ನಾಗಮ್ಮನ ಮಂತ್ರ ಯಶಸ್ವಿಯಾಗಿ ಪ್ರಯೋಗಿಸಿದೆ. ಹಾಗೇ ಎದುರು ಮನೆ ಕಡೆ ನೋಡಿದಾಗ—ನಾಗಮ್ಮ ಗಟ್ಟಿಯಾದ ಒರಟು ನಗೆ ನಗುತ್ತಿದ್ದಳು.

—ದಾಶರಥಿ ಧೀಕ್ಷಿತ್.

ಬಾಲ—ಬೋಧೆ

(ಅರಿತವರಿಗೆ)

ಪಾಠ ೭—೧೧

ದೇವರು	ಸರ್ಕಾರ	ಸೇವೆ	ಭಾಷೆ
ದಿಂಡರು	ಮಿಂಡರು	ಷಂಡರು	ಭಂಡರು

ದೇವರು ದೊಡ್ಡ-ವನು. ಆತ-ನಿಗೆ ತಿಳಿ-ಯದೇ ಇರುವ ವಿಷ-ಯವೇ ಇಲ್ಲ. ಅವನ ಬಾಲ-ವನ್ನು ಹಿಡಿದು ಕೊಂಡು ಓಡಾ-ಡುವರನ್ನು ದಿಂಡರು ಎಂದು ಕರೆ-ಯುತ್ತಾರೆ. ದೇವರು, ದಿಂಡರು, ಎಂದರೆ ಹುಲಿ ನರಿ ಇದ್ದಂತೆ.

ಸರ-ಕಾರ ದೊಡ್ಡದು. ಅದಕ್ಕೆ ತಿಳಿ-ಯದೇ ಇರುವ ವಿಷ-ಯವೇ ಇಲ್ಲ. ಅದನ್ನು ನಡೆ-ಸುವವರು ನಮ್ಮ ದೇವ-ರುಗಳಂತೆಯೇ! ಅವ-ರಿಗೂ ಎಲ್ಲವೂ ತಿಳಿದೇ ಇರುತ್ತೆ. ಆದರೂ ಅವ-ರಿಗೆ ಮಿಂಡ-ರಿದ್ದಾರೆ. ದೇವ-ರಿಗೆ ದಿಂಡ-ರಿದ್ದಂತೆ. ಇವರಿಗೆ ಪುಡಾ-ರಿಗಳಿದ್ದಾರೆ. ಇವರು ಕುಣಿ-ಸಿದಂತೆ ಅವರು ಕುಣಿ-ಯುತ್ತಾರೆ.

ಆದರೆ ನೋಡು! ರಾಮಯ್ಯಾ! ಆ ಬಾಳಿನ ತೋಟದಲ್ಲಿ! ದಿಂಡರೇ ದೇವ-ರಿಗೆ ಮಣಿ-ಯುತ್ತಿದ್ದಾರೆ.

ಇತ್ತ ನೋಡು! ಕೃಷ್ಣಯ್ಯಾ! ಪರ-ದೆಯ ಹಿಂದೆ. ದೇವರೇ ಮಣಿ-ಯುತ್ತಿದ್ದಾನೆ ದಿಂಡರ ಮುಂದೆ!

ಅಹಾ! ಸೇವೆಯೇ ದೊಡ್ಡದು. ಸೇವೆಯೇ ದೇವರು. ಷಂಡ-ರೆಲ್ಲರೂ ಸೇವೆ ಮಾಡು-ತ್ತಲೇ ಇದ್ದಾರೆ.

ಭಾಷೆ ಹಾಕು! ಸೇವೆಯೇ ಸರ್ವಸ್ವ ಎಂದು. ಭಂಡರು ಬಂದು ಭಾಷೆಯನ್ನೇ ಬರಿದು ಮಾಡು-ತ್ತಾರೆ.

ಹೇಳಿ ಬರೆಯಿಸಿ:—

ದೇವರೇ ಸರ-ಕಾರ. ಸೇವೆಯೇ ಸರ್ವಸ್ವ. ಭಾಷೆಯೇ ದೇವರು. ಷಂಡರೇ ಸೇವೆಗೆ. ಮಿಂಡ-ರದೇ ಸರ-ಕಾರ. ದಿಂಡ-ರದೇ ದೇವರು. ಕಾಲಕ್ಕೆ ತಕ್ಕ ಭಾಷೆ. ನೋಟಕ್ಕೆ ತಕ್ಕ ಉಪ್ಪಿನ-ಕಾಯಿ.

—ರಾಮಸ್ವಾಮಿ.

ಕಲಿಯುವ ಮಾರ್ಗ

ಥರ್ಮಾಮೀಟರಿನ ಮೇಲೆ ಡಿಗ್ರಿಗಳಿರುತ್ತವೆ, ನೋಡಿ, ಹಾಗೆ ಹೆಸರಿನ ಅಂತ್ಯದಲ್ಲಿ ಡಿಗ್ರಿಗಳನ್ನು ಪಡೆದಿರುವ ಹಿರಿಯ ಶಸ್ತ್ರಚಿಕಿತ್ಸಕರು, ಅರ್ಧಗಂಟೆ ರೋಗಿಯನ್ನು ಪರೀಕ್ಷೆಮಾಡಿ, "ಹೊಟ್ಟೆಯಲ್ಲಿ ರಣವಾಗಿದೆ, ಶಸ್ತ್ರಚಿಕಿತ್ಸೆ ಈಗಲೇ ಮಾಡಬೇಕು" ಎಂದು ಹೇಳಿದರು; ರೋಗಿಯು ಮೊದಲೇ ಕೊಟ್ಟಿದ್ದ ಹದಿನೈದು ರೂಪಾಯಿಗಳನ್ನು ಒಳಜೇಬಿನಲ್ಲೇ ತಡವುತ್ತಾ.

"ನಮ್ಮ ತಾಯಿಯನ್ನು ಕೇಳಿಕೊಂಡು ಈಗಲೇ ಬರುತ್ತೇನೆ" ಎಂದು ರೋಗಿಯು ಅಲ್ಲಿಂದ ತಪ್ಪಿಸಿಕೊಂಡು, ತನ್ನ ದೊಡ್ಡಮೋಟಾರಿನಲ್ಲಿ ನೇರನೆ ಸ್ವಾಮಿ ಸಹಜಾನಂದರ ಆಶ್ರಮಕ್ಕೆ ಹೊರಟ. ಅವರ ತಾಯಿಯನ್ನು ಕೇಳಿಕೊಂಡು ಬರಬೇಕಾದರೆ, ಹತ್ತುವರ್ಷದ ಮೊದಲೇ ತೀರಿಕೊಂಡಿದ್ದ ಆಕೆಯ ಆಶೀರ್ವಾದ ಪಡೆಯಬೇಕಾದರೆ, ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು, ನಂತರ ಆಕೆಯಿದ್ದ ಲೋಕಕ್ಕೆ ಹೋಗಬೇಕಾಗಿತ್ತು. ಅದಕ್ಕಾಗಿಯೇ ಆ ರೋಗಿ ಆ ರೀತಿ ನೆಪ ಹೂಡಿದ್ದು.

ಸ್ವಾಮಿ ಸಹಜಾನಂದರು, ಆಗತಾನೇ ಭಂಗಿ ಸೇದಿ, ಬಿದ್ದ ಬೂದಿಯನ್ನೆಲ್ಲಾ ಪಕ್ಕದ ಸಿಗರೇಟ್ ಡಬ್ಬದಲ್ಲಿ ವಾರಣವಾಗಿ ಸೇರಿಸಿದ್ದರು. ಮನಸ್ಸು ಶಾಂತವಾಗಿತ್ತು. ಕಂಡವರಿಗೆ ಧೈರ್ಯ ತುಂಬುವ ಸಂತಸ ಅವರ ಮೊಗದಲ್ಲಿತ್ತು.

ರೋಗಿಯು ತನ್ನ ಸಮಸ್ಯೆ, ಬೇನೆಯನ್ನು ಅರುಹಿದ.

ಸ್ವಾಮಿಗಳು ಎರಡು ಚಿಟಿಕಿ ವಿಭೂತಿಯನ್ನು ಆ ಡಬ್ಬದಿಂದ ತೆಗೆದು, ಮಂತ್ರಿಸಿ, ರೋಗಿಯ ಬಾಯಿಗೆ ಹಾಕಿ, ಕಮಂಡಲುವಿನಿಂದ ಗುಟುಕು ನೀರು ಕುಡಿಸಿದರು.

"ನಾಳೆ ಬೆಳಗ್ಗೆ ನಿನ್ನ ಬೇನೆ ಪರಿಹಾರವಾಗದಿದ್ದರೆ, ನಂತರ ಶಸ್ತ್ರಚಿಕಿತ್ಸೆಯ ಯೋಚನೆ ಮಾಡೋಣ. ಇಲ್ಲಿನತನಕ ದೇವರ ಹೆಸರು ಹೇಳಿ ಈ ಮಂತ್ರಿಸಿದ ವಿಭೂತಿ ತೆಗೆದುಕೊಂಡವರು, ಶಸ್ತ್ರಚಿಕಿತ್ಸೆಗೆ ಒಳಗಾಗಿ ಸತ್ತಿಲ್ಲ" ಎಂದು ಸತ್ಯವನ್ನೇ ಹೇಳಿ ರೋಗಿಗೆ ಧೈರ್ಯವನ್ನು ತುಂಬಿ ಕಳುಹಿಸಿದರು.

ರೋಗಿಯು ಮನೆಗೆ ಹೋಗಿ ಮಲಗಿದ, ಹಾಲು ಕುಡಿದು. ನಿದ್ರೆ ಚೆನ್ನಾಗಿ ಬಂತು. ಬೆಳಗ್ಗೆ ಏಳುವ ಹೊತ್ತಿಗೆ, ಗಂಟೆ ಎಂಟಾಗಿತ್ತು. ಬೇನೆಯೆಲ್ಲಾ ಮಾಯ

ವಾಗಿತ್ತು. ಹೊಟ್ಟೆ ಹಶಿಯುತ್ತಿತ್ತು. ಎದ್ದು ಪ್ರಾತರ್ವಿಧಿಗಳನ್ನು ಮುಗಿಸಿ, ಎರಡು ಮಸಾಲೆದೋಸೆಗಳನ್ನು ಎರಡು ಉದ್ದಿನವಡೆಯ ಜತೆಯಲ್ಲಿ ನಂಜಿಕೊಂಡು ತಿಂದು, ದೊಡ್ಡ ಮೋಟಾರಿನಲ್ಲಿ, ದೊಡ್ಡ ಡಾಕ್ಟರನ್ನು ದೊಡ್ಡ ರೀತಿಯಲ್ಲಿ ಉಗುಳಿ ಬರಲು ದೊಡ್ಡಾಸ್ಪತ್ರೆಗೆ ಹೊರಟ. ದೊಡ್ಡ ಡಾಕ್ಟರಿಗೆ ಮಾತಿನ ಮಂಗಳಾರತಿ ಎತ್ತಿದ. ಆತನು ತಿರುಗಿ ಇವನನ್ನು ಪರೀಕ್ಷೆಮಾಡಿ, ನಿನ್ನೆ ಕಂಡ ಚಿಹ್ನೆಗಳ್ಯಾವುದೂ ಇಲ್ಲವಲ್ಲ! ಎಂದು ಆಶ್ಚರ್ಯಪಟ್ಟ. ರೋಗಿಯು ಸ್ವಾಮಿಗಳ ಚಿಕಿತ್ಸೆಯನ್ನು ವಿಶದೀಕರಿಸಿದ. ನಿಮಗೆ ಕೊಟ್ಟ ಹದಿನೈದು ರೂಪಾಯನ್ನು ನೀವು ಅವರಿಗೆ ಕೊಟ್ಟು ಅವರಿಂದ ಕಲಿಯಬೇಕು, ನಿಮ್ಮ ಪಾಠಗಳನ್ನು ಎಂದು ಠೇಂಕಾರದಿಂದ ಹೇಳಿದ.

'ಆಗಲಿ' ಎಂದರು ಡಾಕ್ಟರು. ಈಗಲೇ ಅವರಲ್ಲಿಗೆ ಹೋಗೋಣ ಎಂದರು ಶಸ್ತ್ರ ಚಿಕಿತ್ಸಾಡಾಕ್ಟರು. ಇಬ್ಬರೂ ಸ್ವಾಮಿ ಸಹಜಾನಂದರ ಆಶ್ರಮಕ್ಕೆ, ಆ ಕೂಡಲೇ ಹೋದರು. ರೋಗಿಯು ಸ್ವಾಮಿಗಳಲ್ಲಿ ನಡೆದುದೆಲ್ಲವನ್ನೂ ಅತಿ ವಿನಯದಿಂದ ಬಿನ್ನವಿಸಿಕೊಂಡ. ಡಾಕ್ಟರು "ಸ್ವಾಮಿಗಳೇ ನಿಮ್ಮ ಪಾದದಡಿಯಲ್ಲಿ ಕುಳಿತು ಕೇಳುತ್ತಿದ್ದೇನೆ. ಈ ವಿಭೂತಿಯಲ್ಲಿ ಯಾವ ಆ್ಯಂಟಿ ಹಿಸ್ಟಮಿನ್ನಿದೆ, ಯಾವ ಆ್ಯಂಟಿ ಬಯಾಟಿಕ್ ಇದೆ, ಯಾವ ಔಷಧಿ, ಮೂಲಿಕೆ, ಬೇರು, ಇವುಗಳ ಸತ್ವವಿದೆ. ಮಾನವ ಹಿತಕ್ಕಾಗಿ ನೀವು ನನಗೆ ಹೇಳಿಕೊಡಬೇಕು, ಎಂದು ರೋಗಿಯು ಹಿಂದಿನ ದಿನ ಕೊಟ್ಟಿದ್ದ ಹದಿನೈದನ್ನು ಆ ವಿಭೂತಿ ಡಬ್ಬಿಯ ಕೆಳಗೆ ಮಡಿಚಿಟ್ಟ.

ಆಗ ಸಹಜಾನಂದ ಸ್ವಾಮಿಗಳು ಮಂದಸ್ಮಿತರಾಗಿ ಅಂದರು. "ಡಾಕ್ಟರೇ! ಇದು, ಭಂಗಿ ಸೇದಿದ ಬೂದಿ. ಇದರಲ್ಲಿ ಯಾವ ಔಷಧವೂ ಇಲ್ಲ, ಮೂಲಿಕೆಯೂ ಇಲ್ಲ, ಬೇರೂ ಇಲ್ಲ. ಆದರೆ ರೋಗಿಗೆ ಗುಣವಾಗಿದೆ. ಆಶ್ಚರ್ಯಕರವಾದ ರೀತಿಯಲ್ಲಿ ಗುಣವಾಗಿದೆ. ಯಾಕೆ ಗೊತ್ತೆ? ನೀವು ಶಸ್ತ್ರವೈದ್ಯರುಗಳು, ನಮ್ಮ ರಾಜಕೀಯ ಮುಂದಾಳುಗಳಂತೆ. ನೀವು ಮಾಡುವ ಶಸ್ತ್ರಚಿಕಿತ್ಸೆಯ ಫಲವನ್ನು ರೋಗಿ ಅನುಭವಿಸ ಬೇಕೇ ಹೊರತು, ಅದು ನಿಮ್ಮನ್ನು ತಟ್ಟೊಲ್ಲ. ಆ ಕಾರಣದಿಂದ ನೀವು ಯೋಚನೆ ಯನ್ನು ದೀರ್ಘವಾಗಿ ಮಾಡುವುದಿಲ್ಲ. ನಿಮ್ಮ ಹಿರಿಯರು ಯಾವಾಗಲೋ ಎಂದೋ ಎಲ್ಲೋ ಹೇಳಿದ್ದನ್ನು, ಇಂದು ಅದೇ ವೇದವಾಕ್ಯ ಅನ್ನುತ್ತಾ ನಡೆಸುತ್ತೀರಿ. ನಮ್ಮ ರಾಜಕೀಯ ಮುಖಂಡರಂತೆಯೇನೇ! ಅವರುಗಳೂ ನಿಮ್ಮಂತೆ, ಅವರ ಹಿರಿಯರು ಎಂದೋ ಯಾವಾಗಲೋ ಚುನಾವಣೆ ಕಾಲದ ಬಿರುಸಿನಲ್ಲಿ ಹೇಳಿದ್ದನ್ನು ಇಂದೂ ನಡೆಸೇ ಬಿಡುತ್ತೇವೆ ಎಂದು ಇದ್ದಬದ್ದ ವ್ಯವಸ್ಥೆಗಳನ್ನೆಲ್ಲಾ ನೀರಿನಲ್ಲಿ ಹೋಮ ಮಾಡುತ್ತಾರೆ. ಎಲ್ಲರಿಗೂ ಇರಲು ಮನೆಗಳನ್ನು ಎರಡೇ ತಿಂಗಳಲ್ಲಿ ನಿರ್ಮಿಸುತ್ತೇವೆ ಎಂದು, ಪೂರ್ವರಚಿತ ಮನೆಗಳಿಗಾಗಿ ಕಾರ್ಖಾನೆಯನ್ನು ತೆರೆದು, ಬಿಳಿಯನ ಮೋಸ ಕ್ಕೊಳಗಾಗಿ, ನೂರಾರು ಕೋಟಿ ರೂಪಾಯಿಗಳನ್ನು ಮಂಗಮಾಯ ಮಾಡುತ್ತಾರೆ. ಈ ಪೆಚ್ಚುತನದಿಂದ ಮುಖಂಡರುಗಳಿಗೆ ಏನು ಬಿಸಗೆ ಬಿದ್ದಿದೆ? ಏನೂ ಇಲ್ಲ!

ಅದೇ ರೀತಿ ಲಿಂಗವಿಸ್ಟಿಕ್ ಪ್ರಾಂತ್ಯಗಳು, ಕಾಶ್ಮೀರದಲ್ಲಿ ಕಾಸಿನ ಕಾಲುವೆ ಹರಿಸುವುದು, ಎಲ್ಲದರಲ್ಲೂ, ನೀವು ಅರಿಯದ ರೋಗಿಗಳ ಮೇಲೆ ಹೇಗೆ ನಿಮ್ಮ ಅಹಂಕಾರದ ಅಜ್ಞಾನವನ್ನು ತೀರಿಸಿಕೊಳ್ಳುತ್ತೀರಿ, ಅದೇ ರೀತಿ ಅರಿಯದ ಜನತೆಯ ಮೇಲೆ ಅವರುಗಳು ಅವರ ಆಯ್ಕೆಯ ಅಹಂಕಾರದ ಅಜ್ಞಾನವನ್ನು ತೀರಿಸಿಕೊಳ್ಳುತ್ತಾರೆ.

ನೀವು ಆ ಗುಂಪಿನವರಲ್ಲಾ! ಡಾಕ್ಟರೇ! ಹಾಗಾಗಿದ್ದರೆ, ಇಲ್ಲಿಗೆ ನೀವು ಬರುತ್ತಿರಲಿಲ್ಲ. ನಿಮಗೆ ಕಲಿಯುವ ಮಾರ್ಗದ ಮೇಲೆ ದೃಷ್ಟಿಯಿದೆ. ಆ ಕಾರಣದಿಂದ ನಿಮಗೆ ರೋಗಿಯ ವಿಷಯವನ್ನು ಹೇಳುತ್ತೇನೆ. ಒಂದು ತಿಂಗಳ ಹಿಂದೆ, ಈ ರೋಗಿಯ ಮೊದಲ ಹೆಂಡತಿಯ ಮಗ ಏನೋ ಅಲ್ಪ ವಿಚಾರಕ್ಕಾಗಿ, ಮನೆಯನ್ನು ಬಿಟ್ಟು ದೇಶಾಂತರ ಹೋಗಿಬಿಟ್ಟಿದ್ದ. ಇವರ ಮನೆಯವರೆಲ್ಲರಿಗೂ ನನ್ನಲ್ಲಿ ಅಪರಿಮಿತ ವಿಶ್ವಾಸ, ಹಾಗೂ ನಂಬಿಕೆ. ಆದ್ದರಿಂದ ನಿನ್ನೆ ಬೆಳಿಗ್ಗೆ ಆತ ಇಲ್ಲಿಗೇ ಹಿಂತಿರುಗಿ ಬಂದ. ಮಧ್ಯಾಹ್ನ ಆತನ ಹುಡುಗುತನವನ್ನು ಅವನಿಗೆ ತೋರಿಸಿಕೊಟ್ಟೆ. ಸಂಜೆ ಮನೆಗೆ ಹೋದ. ಅವನನ್ನು ಕಂಡ ರೋಗಿಗೆ ಬೇನೆ ವಾಸಿಯಾಯಿತು. ರೋಗಿಯ ಕರುಳನ್ನು ಕುಯ್ಯುತ್ತಿದ್ದುದು, ರಣವಲ್ಲಾ! ಮೊದಲ ಹೆಂಡಿರ ಮಗನಿಗೆ ಅನ್ಯಾಯವನ್ನೇನಾದರೂ ಮಾಡಿದೆನೇನೋ ಎನ್ನುವ ಶಂಕೆ!! ಈ ಶಂಕೆ ಹೋಯಿತು. ರೋಗಿಯು ಸರಿಹೋದ.

ಇನ್ನು ಮೇಲೆ ಎಂತಹ ಜರೂರು ಶಸ್ತ್ರಚಿಕಿತ್ಸಾ ಸಂದರ್ಭ ಬಂದರೂ ಇದನ್ನು ಮರೆಯಬೇಡಿ! ಕಲಿಯುವ ಮಾರ್ಗ ಇದು"

ಎಂದು ಹೇಳಿದರು ಸ್ವಾಮಿಗಳು.

ಡಾ|| ಬಚ್ಚ.

[ಮೊನ್ನೆ ಡಾಕ್ಟರ ಸಮ್ಮೇಳನದಲ್ಲಿ ಡಾ|| ಬಚ್ಚ,ಎಂ.ಬಿ.,ಎಫ್.ಆರ್.ಸಿ.ಎಸ್. ಎಫ್.ಎ.ಎಸ್.ಸಿ.,ಎಫ್.ಎಸ್.ವು.,ಎಫ್.ಒ.ಒ ಎಲ್ , ಅವರು ಭಾಷಣ ಮಾಡಿದಾಗ ನೆರೆದಿದ್ದವರೆಲ್ಲರೂ ಹೊಟ್ಟೆ ಹುಣ್ಣಾಗುವಂತೆ ನಕ್ಕರು. ಡಾಕ್ಟರೇ ಅಂತಹ ಲೇಖನವೊಂದನ್ನು ಕೊರವಂಜಿಗೆ ಕಳಿಸಿ ಎಂದಾಗ ಈ ಲೇಖನವನ್ನು ಕಳಿಸಿದ್ದಾರೆ. ಅವರ ಮೇಲಿನ ಮೋಹಕ್ಕಾಗಿ ಪ್ರಕಟಿಸಿದ್ದೇವೆ. ಕ್ಷಮಾಪಣೆಗಳು— **ಸಂ!**]

—o—

ಪಿ. ಸೌ.ದಿಂದ ಒಂದು ಪತ್ರ

"ಡಿಯರ್ ವಾಳ್ವೇಕರ್, ಶರಣಾರ್ತಿಗಳು. ದತ್ತುಮಾಡುವ ನಮಸ್ಕಾರಗಳು. ನಾನು ಇಲ್ಲಿಗೆ ವರ್ಗವಾಗಿ ಬಂದಾಗ, ಪೋಲೀಸ್ ಆಫೀಸಿನಲ್ಲಿ ಚಿಕ್ಕ ಸಾಹೇಬರ ಕಚೇರಿಯಲ್ಲಿ, ಸೇರಿಕೊಂಡೆ. ಉಳಿದ ಜತೆ ನೌಕರರೆಲ್ಲರೂ ಶಹಣೆ ಇದ್ದಾರೆ, ಚಾಲೂಕಾಗಿದ್ದಾರೆ. ಆದರೆ ನಮ್ಮ ಜವಾನ ಮುದ್ದ ಅಂತ ಒಬ್ಬ ಆಧಾನೆ. ಮೊದ್ದು ಮೊದ್ದಾಗಿದ್ದಾನೆ. ಚಿಕ್ಕಸಾಹೇಬರು ಮ್ಯಾನೇಜರನ್ನು ಬರಹೇಳಿದರೆ ನನ್ನನ್ನು ಬಂದು ಕರೆಯುತ್ತಿದ್ದ. ನಾನು ಪೆಚ್ಚಾಗಿ ಹಿಂತಿರುಗಿ ಮ್ಯಾನೇಜರಿಗೆ ಹೀಗಾಯ್ತು, ಮುದ್ದ ಅಪ್ರಯೋಜಕ ಅಂದಾಗ "ಇರಲಿ ಮುಂದೆ ನೋಡಿ" ಎಂದರು. ಶಾಮರಾಯರಿಗೆ ಹೋಗಬೇಕಾದ ಫೈಲು ನನ್ನ ಮೇಜಿನ ಮೇಲೆ ಇರಸಿಹೋದಾಗ, ಅದನ್ನು ನಾನೇ ಶಾಮರಾಯರ ಮೇಜಿನ ಹತ್ತಿರಕ್ಕೆ ಹೋಗಿ ಈ ಮುದ್ದ ನಾಲಾಯಕ್ಕು ಎಂದಾಗ ಆತ, "ಹೌದ್ರೀ! ಆದರೂ ಮುಂದೆ ನೋಡಿ" ಎಂದರು. "ಮುದ್ದ, ಮುದ್ದ" ಎಂದು ಅವಸರದಲ್ಲಿ ಕೂಗಿದೆ, ಮುಗಿದ ತುರ್ತು ಫೈಲನ್ನು ಚಿಕ್ಕಸಾಹೇಬರಿಗೆ ತೆಗೆದುಕೊಂಡು ಹೋಗಲೆಂದು. ನಾಪತ್ತೆ. ಬಾಗಿಲ ಹತ್ತಿರ ಹೋಗಿ ಕೂಗೋಣ ಎಂದು ಹೋದರೆ ಅಲ್ಲೇ ನಿದ್ದೆಮಾಡುತ್ತಿದ್ದಾನೆ. ಅವನನ್ನು ಎಬ್ಬಿಸಿ ಫೈಲಿನೊಡನೆ ಚಿಕ್ಕಸಾಹೇಬರ ಬಳಿಗೆ ಕಳಿಸಿ ನಂತರ, ಹಿರಿಕಾರಕೂನನಿಗೆ ಕಂಪ್ಲೇಂಟ್ ಮಾಡಿದೆ, ಈ ಮುದ್ದ ಇದ್ದರೂ ಒಂದೇ, ಹೋದರೂ ಒಂದೇ, ಎಂದು. ಅವರು ಸಾವಧಾನವಾಗಿ ಕೇಳಿ, ಸಹಾನೂಭೂತಿಯಿಂದ "ಮುಂದಕ್ಕೆ ನೋಡಿ, ಆಮೇಲೆ ಯೋಚನೆಮಾಡೋಣ" ಎಂದರು. ೩ ಗಂಟೆಯಾಯ್ತು.

ದೋಡ್ಡ ಸಾಹೇಬರು ಬಂದು ಮ್ಯಾನೇಜರ ಮೇಜಿನಮೇಲೆ ಕುಳಿತರು. ದೊಡ್ಡ ಸಾಹೇಬರು ಬಂದು ಹಿರಿಕಾರಖೂನರ ಮೇಜಿನ ಮೇಲೆ ಕುಳಿತರು. ಚಿಕ್ಕಸಾಹೇಬರು ಶಾಮರಾಯರ ಮೇಜಿನಮೇಲೆ ಕಾಣಿಸಿಕೊಂಡರು. ಸೂಪರೆಂಟರು ನನ್ನ ಮೇಜಿನ ಮೇಲೇ ಬಂದು ಕುಳಿತರು. ಎರಡೇ ನಿಮಿಷದಲ್ಲಿ ಇದೆಲ್ಲಾ ಆಯಿತು. ಆಗ ಮುದ್ದ ಬಂದು ಇದ್ದವರೆಲ್ಲರ ಕೈಲೂ ಒಂದೊಂದು ಲೋಟ ಕೊಟ್ಟು ಕೆಟಲಿನಲ್ಲಿ ತಂದಿದ್ದ ಚಹಾವನ್ನು ಹಂಚಿದ.

ದಿಟವಾಗಲೂ ವಾಳ್ವೇಕರ್! ಅಂತಹ ರುಚಿಯಾದ ಪಸಂದಾದ ಚಹಾವನ್ನು ಜೀವಮಾನದಲ್ಲೇ ನೀನೂ ನಾನು ಕುಡಿದಿದ್ದಿಲ್ಲ. ದೊಡ್ಡವರು ಚಿಕ್ಕವರು ಅನ್ನುವ ಬೇಧವಿಲ್ಲದ ಸಮತಾಸಮಾಜದ ವಾತಾವರಣವಾಗ ಏರ್ಪಟ್ಟಿತ್ತು.

ಈಗ "ಮುಂದೆ ನೋಡಿ" ಎಂಬ ಪಲ್ಲವಿಯ ಅರ್ಥವಾಯಿತು! ಮುದ್ದ ಮಾಡಿ ತಂದು ಬಡಿಸಿದ ಚಹಾ, ಕಲೆಯ ಪರಮಾವಧಿಯನ್ನು ಮುಟ್ಟಿತ್ತು.

ನೀನು ಮರಾಟವಾಡಾಕ್ಕೆ ಬದಲಾಗಿ ವಿಶಾಲ ಮೈಸೂರಿಗೇ ಬಂದಿದ್ದರೆ, ನೀನೂ ಈ ಸ್ವರ್ಗ ಸುಖವನ್ನು ಅನುಭವಿಸಬಹುದಿತ್ತು. ಆದರೂ ಪರವಾಗಿಲ್ಲ. ರಜೆ ಸಿಕ್ಕಾಗ ಬಾ.

ನೀವೆಲ್ಲಾ ಚೆನ್ನಾಗಿದ್ದೀರಾ! ನಾವು ಪಸಂದು ಇಲ್ಲಿ.

ಶ್ರೀ ವಾಳ್ವೇಕರ್ — ನಿಮ್ಮವ,

ಗೃಹ ಇಲಾಖಾ, ಪುಣೆ. — ತಿಟ್ಟನಹಳ್ಳಿ, ಹಾ.ಪಿ.


ಎಲ್ಲಾ ಬಗೆಯ ಮರಕೆಲಸಕ್ಕೆ...ಒಳಭಾಗಕ್ಕೆಯೂ ಹೊರಭಾಗಕ್ಕೆ ಬಳಿಯುವದಕ್ಕೆ
ಎಲ್ಲಾ ಹವಾಗುಣದಲ್ಲಿಯೂ ನಿಲ್ಲುವಂತೆ ತಯಾರಿಸಿರುವುದು
ತೊಳೆಯಬಹುದಾದ ಗೋಡೆಯಮೇಲೆ ಬಳಿಯುವ ಫ್ಲಾಟ್ ಪೇಯಿಂಟ್
ಶಾಲಿಮಾರ್ ವುಡ್‌ಕೋಟ್
ರೆಡಿಮಿಕ್ಸ್ಡ್ ಪೇಯಿಂಟ್
ಒಳ್ಳೇ ಹೊಳಪಿರುವ, ಬಹಳ ಬಾಳಿಕೆಯುಳ್ಳ ರೆಡಿಮಿಕ್ಸ್ಡ್ ಬಣ್ಣ
ಶಾಲಿಮಾರ್ ಲಸ್ಟ್ರಾಲ್
ಅಲ್ಯೂಮಿನಿಯಂ ಪೇಯಿಂಟ್
ವಿಸ್ತಾರ ಮೇಲ್ಮೈ ಪ್ರಸರಣ ಶಕ್ತಿಯುಳ್ಳದ್ದು
ಶಾಲಿಮಾರ್ ಮ್ಯಾಟ್‌ಕೋಟ್
ಫ್ಲಾಟ್ ವಾಲ್ ಪೇಯಿಂಟ್
ಒಳಭಾಗದ ಗಾರೆ, ಕಾಂಕ್ರೀಟು ಮತ್ತು ಮರಕ್ಕೆ ಹಿಡಿಯುವುದು. ಬಾಳಿಕೆವುಳ್ಳದ್ದು.
ಅತ್ಯುತ್ತಮವಾದ ಸಕಲಕಾರ್ಯಗಳಿಗೂ ಉಪಯೋಗಿಸಬಹುದಾದ ಎನಾಮೆಲ್
ಅನೇಕ ತರದ ಕೈಗಾರಿಕೆ ಮತ್ತು ಮನೆಕೆಲಸಗಳಿಗೆ ಉಪಯೋಗಕ್ಕೆ ಬೀಳುವುದಲ್ಲದೆ ಯಾವುದರಮೇಲೂ ಬಳಿಯಬಹುದು. ಬ್ರಷ್ಷಿನಿಂದ ಬಳಿಯಬಹುದು, ಸ್ಪ್ರೇ ಮಾಡಬಹುದು ಅಥವಾ ಬಣ್ಣದಲ್ಲಿ ಅದ್ದಲೂಬಹುದು; ಆಗಿಂದಾಗ್ಗೆ ತೊಳೆದರೂ ಬಣ್ಣ ನಿಲ್ಲುವುದು
ಶಾಲಿಮಾರ್ ಸೂಪರ್‌ಲ್ಯಾಕ್
ಶಾಲಿಮಾರ್ ಸೂಪರ್‌ಲ್ಯಾಕ್
SHALIMAR
SHALIMAR PAINT COLOUR & VARNISH CO., PRIVATE LTD.,
"Karim Manzil" Kumbargundi Road, Bangalore City.
Telephone No, 3607
SPW 326

ಈ ತಿಂಗಳಲ್ಲಿ ವಿಶಾಲ ಮೈಸೂರಿನ
ಎಲ್ಲಾ ಪ್ರಮುಖ ಕೇಂದ್ರಗಳಲ್ಲಿ ಬಿಡುಗಡೆಯಾಗಲಿದೆ.

— ವಿಕ್ರಮ್‌ರವರ —

ಭಕ್ತ ಮಾರ್ಕಂಡೇಯ (ಕನ್ನಡ)



ನಾಗಯ್ಯ - ಪುಷ್ಪವಲ್ಲಿ - ನಾಗೇಂದ್ರ ರಾವ್ - ನರಸಿಂಹರಾಜು
ಬಾಲಸರಸ್ವತಿ - ಸೂರ್ಯಕಳಾ - ಪದ್ಮಿನಿ ಪ್ರಿಯದರ್ಶಿನಿ - ಮಾಸ್ಟರ್
ಆನಂದ್ - ಬೇಬಿ ಉಮಾ - ಮುಂತಾದವರು.

A VIKRAM RELEASE